# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)

(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

# KITTURU RANI CHANNAMMA UNIVERSITY

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**

*(Formerly known as 'Rani Channamma University, Belagavi')*

**E-mail:** registrar@rcub.ac.in

**ಕುಲಸಚಿವರ ಕಾರ್ಯಾಲಯ**

**Office of the Registrar**

**Website:** www.rcub.ac.in

**Phone No.:** 0831-2565234

## 100 ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2026 ನೇ ಸಾಲಿನ 04 ನೇ ಸಭೆಯ ನಡಾವಳಿಗಳು

**ದಿನಾಂಕ : ಶುಕ್ರವಾರ, 24-07-2026**

**ಸಮಯ : ಪೂರ್ವಾಹ್ನ 11:00 ಘಂಟೆ**

**ಸ್ಥಳ : ಸಿಂಡಿಕೇಟ್ ಸಭಾಂಗಣ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ**

# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)

(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

# KITTURU RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-UShA (MERU)

*(Formerly known as 'Rani Channamma University, Belagavi')*

E-mail:registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website: www.rcub.ac.in

Phone No.: 0831-2565234


ಕ್ರ.ಸಂ.: ಕಿರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2026-27/ ದಿನಾಂಕ:

**ದಿನಾಂಕ: 24 ಜುಲೈ 2026 ರಂದು ಪೂರ್ವಾಹ್ನ 11.00 ಘಂಟೆಗೆ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 100ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2026 ನೇ ಸಾಲಿನ 04 ನೇ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.**

**I. ಹಾಜರಾದ ಸದಸ್ಯರು**

| | | |
|---|---|---|
| 1. | **ಪ್ರೊ. ಸಿ. ಎಂ.ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಡಾ. ಸುಷ್ಮಾ ಆರ್. | ಸದಸ್ಯರು |
| 3. | ಶ್ರೀ. ಎ.ಎಸ್. ಪಾಟೀಲ | ಸದಸ್ಯರು |
| 4. | ಡಾ. ಸಿ.ಬಿ.ಗಣಾಚಾರಿ | ಸದಸ್ಯರು |
| 5. | ಡಾ. ನೀಲಪ್ಪ ಹೊಸಮನಿ | ಸದಸ್ಯರು |
| 6. | ಡಾ. ಎಂ.ಮಹೇಶ | ಸದಸ್ಯರು |
| 7. | ಶ್ರೀ. ರಾಮಚಂದ್ರ ಕಿಲ್ಲೇದಾರ | ಸದಸ್ಯರು |
| 8. | ಶ್ರೀ. ರವೀಂದ್ರ ಎಂ. ನಾಯ್ಕರ | ಸದಸ್ಯರು |
| 9. | ಶ್ರೀ. ರಫೀ ಭಂಡಾರಿ | ಸದಸ್ಯರು |
| 10. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 11. | ಡಾ. ಮಹಾಂತೇಶ ಕಂಬಾರ | ಸದಸ್ಯರು |
| 12. | ಡಾ. ಎಸ್. ಎಸ್. ಅಂಗಡಿ | ಸದಸ್ಯರು |
| 13. | ಪ್ರೊ. ಡಿ. ಎನ್. ಪಾಟೀಲ್ | ಕುಲಸಚಿವರು (ಮೌಲ್ಯಮಾಪನ) ಸದಸ್ಯರು |
| 14. | ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**II. ಹಾಜರಾಗದ ಸದಸ್ಯರು:**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ಶ್ರೀಮತಿ. ಡಾ. ಸುನೀತಾ ಜಿ ಅಂಗಡಿ | ಸದಸ್ಯರು |
| 4. | ಡಾ. ಕಾವೇರಿ ಎಚ್. ಎಮ್. | ಸದಸ್ಯರು |
| 5. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 6. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರುÄ |
| 7. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)

(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

# KITTURU RANI CHANNAMMA UNIVERSITY

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**

*(Formerly known as 'Rani Channamma University, Belagavi')*

**E-mail:** registrar@rcub.ac.in

**ಕುಲಸಚಿವರ ಕಾರ್ಯಾಲಯ**

**Office of the Registrar**

**Website:** www.rcub.ac.in

**Phone No.: 0831-2565234**


## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** 24 ಜುಲೈ 2026 ರಂದು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 100ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 4ನೇ ಸಿಂಡಿಕೇಟ್ ಸಭೆಯ ನಡುವಳಿಗಳು

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27) (28) (2).
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 07-07-2026.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 08-07-2026.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2) ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 100 ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 4ನೇ ಸಿಂಡಿಕೇಟ್ ಸಭೆಯನ್ನು ದಿನಾಂಕ: 24-07-2026 ರಂದು ಪೂರ್ವಾಹ್ನ 11.00 ಗಂಟೆಗೆ ಸಿಂಡಿಕೇಟ್ ಸಭಾಂಗಣ, ಕಿರಾಚವಿ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು. ನಂತರ ಗೌರವಾನ್ವಿತ ಕುಲಾಧಿಪತಿಗಳಿಂದ ನಾಮನಿರ್ದೇಶಿತರಾದ ಶ್ರೀ. ಎ. ಎಸ್. ಪಾಟೀಲ ಹಾಗೂ ಶ್ರೀ. ಸಿ. ಬಿ. ಗಣಾಚಾರಿ ಅವರನ್ನು ಮಾನ್ಯ ಕುಲಪತಿಗಳು ಹೂಗುಚ್ಚ ನೀಡಿ ಸ್ವಾಗತಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಮಾನ್ಯ ಕುಲಪತಿಗಳು ಪ್ರೊ. ಬಿ. ಆರ್. ಅನಂತನ್ ಅವರನ್ನು ನೆನೆಯುತ್ತ ಮೊದಲನೇ ಸಿಂಡಿಕೇಟ್ ಸಭೆಯು ದಿನಾಂಕ:28-04-2011 ರಲ್ಲಿ ಪ್ರೊ. ಬಿ. ಆರ್. ಅನಂತನ್ ಅವರ ಅಧ್ಯಕ್ಷತೆಯಲ್ಲಿ ನಡೆದಿತ್ತು. ಈಗ 100 ನೇ ಸಿಂಡಿಕೇಟ್ ಸಭೆಗೆ ಆಗಮಿಸಿದ ಎಲ್ಲರಿಗೂ ನಮಸ್ಕಾರಗಳನ್ನು ತಿಳಿಸಿದರು ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ 15 ಜನ ಸದಸ್ಯರು ಹಾಗೂ ಸರ್ಕಾರದಿಂದ 30 ಜನ ಸದಸ್ಯರು ನಾಮನಿರ್ದೇಶಿತರಾಗಿದ್ದು ಎಲ್ಲರೂ ಈ ವಿಶ್ವವಿದ್ಯಾಲಯದ ಪ್ರಗತಿಗೆ ಕಾರಣರಾಗಿರುತ್ತಾರೆ. ವಿಶ್ವವಿದ್ಯಾಲಯದ ಆರಂಭದಿಂದ ಇಲ್ಲಿಯವರೆಗೆ ವಿಶ್ವವಿದ್ಯಾಲಯಕ್ಕೆ ಎಲ್ಲ ಸಿಂಡಿಕೇಟ್ ಸದಸ್ಯರ ಕೊಡುಗೆಗಳು ಮಹತ್ತರವಾಗಿದೆ.

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಇಡೀ ರಾಜ್ಯದಲ್ಲಿ ಸ್ನಾತಕ/ಪದವಿಯಲ್ಲಿ ಅತ್ಯಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ. ಕಳೆದ ವರ್ಷಕ್ಕಿಂತ ಈ ವರ್ಷ 2000 ಹೆಚ್ಚು ಪ್ರವೇಶ ಅರ್ಜಿ ಸ್ವೀಕೃತಿಯಾಗಿರುವ ಕುರಿತು ಮಾತನಾಡಿದರು. ಮುಂದುವರೆದು, ಪ್ರತಿ ವರ್ಷದ ಘಟಿಕೋತ್ಸವವನ್ನು ಸದರಿ ವರ್ಷದ ಪರೀಕ್ಷೆಗಳು ಮುಗಿದು ಅಂತಿಮ ಫಲಿತಾಂಶ ಪ್ರಕಟಿಸಿದ 50 ದಿನಗಳೊಳಗಾಗಿ ಘಟಿಕೋತ್ಸವವನ್ನು ಆಯೋಜಿಸುವಂತೆ ಕುಲಸಚಿವರು (ಮೌಲ್ಯಮಾಪನ) ಇವರಿಗೆ ತಿಳಿಸಿದರು.

## ಶೂನ್ಯ ಅವಧಿ ಚರ್ಚೆಗಳು

**ಶ್ರೀ. ರಫೀ ಭಂಡಾರಿ ಪ್ರಸ್ತಾಪಿಸಿರುವ ವಿಷಯಗಳು**

**1.** ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಶಿಸ್ತಿನ (Disciplane) ಕೊರತೆ ಇದೆ ಅದನ್ನು ಸರಿಪಡಿಸುವುದು.

**2.** ವಿಶ್ವವಿದ್ಯಾಲಯದಲ್ಲಿ ನಡೆದ ಎಲ್ಲಾ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸುವುದು.

**3.** 2026-27 ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶಾತಿಯಲ್ಲಿ ಹಿರಿಯ ನಾಗರಿಕರಿಗೆ (Senior Citizen) ಅವಕಾಶ ನೀಡುವುದು.

**ಡಾ. ಮಹಾಂತೇಶ ಕಂಬಾರ ಪ್ರಸ್ತಾಪಿಸಿರುವ ವಿಷಯಗಳು**

**1.** 2026 ನೇ ಸಾಲಿನ 100 ನೇ ಸಿಂಡಿಕೇಟ್ ಸಭೆಯಲ್ಲಿ ಒಂದು ನಿರ್ಧಾರ ಮಾಡುವುದು ವಿಶ್ವವಿದ್ಯಾಲಯದ ಒಳಿತಿಗಾಗಿ ವಿಶ್ವವಿದ್ಯಾಲಯದ ಸುತ್ತಮುತ್ತಲಿನ ಜನರ ಬೆಂಬಲ ಬಹಳ ಇದೆ. ವಿಶ್ವವಿದ್ಯಾಲಯವನ್ನು ಕಟ್ಟುವಾಗ ಮನ್ನೂರ ಅಂತ ಹಳ್ಳಿಯಲ್ಲಿ ಒಂದು ಪ್ರೈಮರಿ ಸ್ಕೂಲನ್ನ Adopt ಮಾಡಿಕೊಳ್ಳಲಾಗಿತ್ತು. ಅದೇ ತರಹ ಈಗ Extra Curricular Activities ಅಂತ ಇಲ್ಲಿ ಬಡ ಜನರು, ನಿರ್ಗತಿಕರು, ಬುಡಕಟ್ಟು ಜನರಿಗಾಗಿ ಯಾವುದಾದರೂ ಒಂದು ಜಾಗವನ್ನು ಹುಡುಕಿ ಅದಕ್ಕಾಗಿ Skill Oriented ಇರುವಂತ Teachers ರನ್ನು ತೆಗೆದುಕೊಂಡು ವಾರಕ್ಕೆ ಅಥವಾ 15 ದಿವಸಕ್ಕೆ ಒಂದು ಸಾರಿ Orientation Programs ಮಾಡುವುದು.

**2.** ಇಡೀ ಕರ್ನಾಟಕದಲ್ಲಿ ಹಂಪಿ ವಿಶ್ವವಿದ್ಯಾಲಯದಲ್ಲಿ ಬಿಟ್ಟರೆ Tribal Studies ಎಲ್ಲೂ ಇಲ್ಲ, ಅದಕ್ಕಾಗಿ ಇಲ್ಲಿ Tribal Studies ಮಾಡುವುದರಿಂದ ಈ ಭಾಗದ ಪ್ರವಾಸೋದ್ಯಮಕ್ಕೂ ಅನುಕೂಲ ಆಗುತ್ತದೆ ಹಾಗೂ Larning ಜೊತೆಗೆ Earning ಆಗುತ್ತದೆ. ಈ ಭಾಗಕ್ಕೆ ಏನಾದರೂ ಒಂದು ಕೊಡುಗೆಯನ್ನು ಕೊಡುವ ಕುರಿತು ನಿರ್ಣಯ ತೆಗೆದುಕೊಳ್ಳುವುದು.

**3.** ವಿಶ್ವವಿದ್ಯಾಲಯದಲ್ಲಿ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಗಳಲ್ಲಿ ಅನೈತಿಕ ಚಟುವಟಿಕೆಗಳಿಂದ ಮುಕ್ತ ಮಾಡುವ ಶಿಸ್ತನ್ನು ತರುವುದು.

ಸದಸ್ಯರುಗಳು ತಿಳಿಸಿದ ಅಭಿಪ್ರಾಯಗಳ ಕುರಿತು ಚರ್ಚಿಸಿದ ಸಭೆಯು ಈ ಕೆಳಕಾಣಿಸಿದಂತೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

1. ಸದರಿ ವಿಷಯದ ಕುರಿತು ಶ್ರೀ. ರಫಿ ಭಂಡಾರಿ ಇವರ ನೇತೃತ್ವದಲ್ಲಿ ಶಿಸ್ತು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

2. ವಿಶ್ವವಿದ್ಯಾಲಯದ ಸುತ್ತಮುತ್ತಲಿರುವ ಭೂತರಾಮನಹಟ್ಟಿ ಮತ್ತು ಗೊಡಿಹಾಳ ಅಂತಹ 3 ಸಣ್ಣ ಊರುಗಳಲ್ಲಿನ ಪ್ರಾಥಮಿಕ ಶಾಲೆಗಳನ್ನು ವಿಶ್ವವಿದ್ಯಾಲಯದಿಂದ ದತ್ತು ಸ್ವೀಕಾರ ಮಾಡುವುದು ಹಾಗೂ ಹಂತ ಹಂತವಾಗಿ ಆ ಊರಿಗೆ ಹಾಗೂ ಶಾಲೆಗಳಿಗೆ ನಮ್ಮಿಂದ ಸಾಧ್ಯವಾಗುವಂತಹ ಏನಾದರೂ ಅನುಕೂಲ ಮಾಡಿಕೊಡುವುದು.

3. ಸ್ನಾತಕೋತ್ತರ ಪ್ರವೇಶಾತಿಯಲ್ಲಿ Tribal Diploma Ad on course ಆರಂಭಿಸುವುದು.

4. ವಿಶ್ವವಿದ್ಯಾಲಯದಲ್ಲಿ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಗಳಲ್ಲಿ ಅನೈತಿಕ ಚಟುವಟಿಕೆಗಳಿಂದ ಮುಕ್ತ ಮಾಡುವ ವಿಷಯವು ಸೂಕ್ಷ್ಮವಾಗಿದ್ದು, ಅದನ್ನು ನಿಯಮಗಳ ಹಿನ್ನೆಲೆಯಲ್ಲಿ ಸಿಬ್ಬಂದಿಗಳ ನಡತೆ ನಿಯಮಗಳ ಉಲ್ಲಂಘನೆ ಕುರಿತಾಗಿ ಪರಿಶೀಲಿಸಿ ಸೂಕ್ತ ಕ್ರಮವಹಿಸುವುದು.

5. ವಿಶ್ವವಿದ್ಯಾಲಯದಲ್ಲಿ ನಡೆದ ಎಲ್ಲಾ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಧರಿಸಲಾಯಿತು.

6. 2026-27 ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶಾತಿಯಲ್ಲಿ ಹಿರಿಯ ನಾಗರಿಕರಿಗೆ (Senior Citizen) ಅವಕಾಶ ನೀಡಲು ತೀರ್ಮಾನಿಸಲಾಯಿತು.

**ತದನಂತರ ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2026/07/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ದೃಢೀಕರಣಕ್ಕಾಗಿ ಸಭೆಯ ಮುಂದೆ ಪ್ರಸ್ತುತಪಡಿಸಲಾಯಿತು.<br><br>1. ತಿಡಗುಂದಿ ಸರಕಾರಿ ಮಹಾವಿದ್ಯಾಲಯದ ಬದಲಾಗಿ ಕಾಯಕಯೋಗಿ ಗ್ರಾಮೀಣ ಎಸ್ ಎಸ್ ಡಿ ವಿ ಅಸೋಸಿಯೆಶನ್ ಮಹಾವಿದ್ಯಾಲಯ ಎಂದು ಓದಿಕೊಳ್ಳುವುದು.<br>2. ಮಹಾವಿದ್ಯಾಲಯದ ಪ್ರಾಂಶುಪಾಲರು ಪ್ರವೇಶ ಪತ್ರ (Hall Ticket) ಕ್ಕೆ Online (UUCMS) ನಲ್ಲಿ ಅನುಮೋದನೆ ನೀಡದೇ ಇರುವುದಕ್ಕೆ ಬದಲಾಗಿ Online Exam Application ಎಂದು ಓದಿಕೊಳ್ಳುವುದು.<br>ಸದರಿ ತಿದ್ದುಪಡಿಗಳೊಂದಿಗೆ ಅನುಪಾಲನಾ ವರದಿಯನ್ನು ಸಭೆಯುದೃಢೀಕರಿಸಿತು. |
| 02 | 2026/07/02 | ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿರುವ **ನಿತ್ಯಾ** ಎಂಬ ಹೆಣ್ಣು ಹುಲಿಯನ್ನು ದತ್ತು ಪಡೆಯುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯ, ಭೂತರಾಮನಹಟ್ಟಿಯಲ್ಲಿ 2021-22, 2022-23 ಮತ್ತು 2024-25 ನೇ ಸಾಲಿನವರೆಗೆ ನಿರೂಪಮಾ ಎಂಬ ಹೆಣ್ಣು ಸಿಂಹವನ್ನು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ದತ್ತು ಪಡೆಯಲಾಗಿತ್ತು. ಸದರಿ ಸಿಂಹವು ಬಹು ಅಂಗಾಂಗ ವೈಫಲ್ಯದಿಂದ ಅಸುನಿಗಿರುತ್ತದೆ. ನಂತರ 2025-26 ನೇ ಸಾಲಿನಲ್ಲಿ ಕನಿಷ್ಕ ಎಂಬ ಹುಲಿಯನ್ನು ದತ್ತು ಪಡೆಯಲಾಗಿತ್ತು, ಆದರೆ, 2026-27 ನೇ ಸಾಲಿನಲ್ಲಿ ಕಿರು ಮೃಗಾಲಯದಲ್ಲಿರುವ ನಿತ್ಯಾ ಎಂಬ ಹೆಣ್ಣು ಹುಲಿಯನ್ನು ದತ್ತು ಪಡೆಯುವಂತೆ ಕ್ಯುರೇಟರ್ ಹಾಗೂ ಅರಣ್ಯಾಧಿಕಾರಿಗಳು ವಿನಂತಿಸಿಕೊಂಡಿರುವುದರಿಂದ, 2026-27 ನೇ ಸಾಲಿಗೆ ನಿರ್ವಹಣೆಗಾಗಿ ರೂ. 2,00,000/- ಗಳನ್ನು ನೀಡಿ ನಿತ್ಯಾ ಎಂಬ ಹೆಣ್ಣು ಹುಲಿಯನ್ನು ದತ್ತು ಪಡೆಯಲು ಸಭೆಯು ಅನುಮೋದನೆ ನೀಡಿತು. |
| 03. | 2026/07/03 | ಹಿರೇಬಾಗೇವಾಡಿಯಲ್ಲಿನ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿರುವ ರಸ್ತೆ ಹಾಗೂ ಕಟ್ಟಡಗಳಿಗೆ ನಾಮನಿರ್ದೇಶಿಸಲು ಅನುಮತಿ ನೀಡುವ ಕುರಿತು. |
| | **ತೀರ್ಮಾನ** | ವಿಶ್ವವಿದ್ಯಾಲಯದ ಶೈಕ್ಷಣಿಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಉದ್ದೇಶದಿಂದ ಹಾಗೂ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಮಹನೀಯರ ಆದರ್ಶ ಸಾಧನೆ ಮತ್ತು ಕೊಡುಗೆಗಳ ಕುರಿತು ಅರಿವು ಹಾಗೂ ಪ್ರೇರಣೆಯನ್ನು ಮೂಡಿಸುವ ದೃಷ್ಟಿಯಿಂದ ಹಿರೇಬಾಗೇವಾಡಿಯಲ್ಲಿನ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿರುವ ಮುಖ್ಯ ರಸ್ತೆ, ಆಂತರಿಕ ರಸ್ತೆಗಳು ಆಡಳಿತ ಕಟ್ಟಡಗಳು, ಶೈಕ್ಷಣಿಕ ಕಟ್ಟಡಗಳು ಸಂಶೋಧನಾ ಕೇಂದ್ರಗಳು, ವಸತಿನಿಲಯಗಳು ಹಾಗೂ ಇತರೆ ಪ್ರಮುಖ ಕಟ್ಟಡಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಕೊಡುಗೆ ಸಲ್ಲಿಸಿರುವ ಮಹನೀಯರ ಹೆಸರುಗಳನ್ನು ಈ ಕೆಳಕಾಣಿಸಿದಂತೆ ನಾಮನಿರ್ದೇಶಿಸಿ ಸಭೆಯು ಅನುಮೋದನೆ ನೀಡಿತು. ಇದಕ್ಕೆ ಅಗತ್ಯವಿರುವ ರಾಜ್ಯಪತ್ರ/Ordinance ಹೊರಡಿಸಲು ಕ್ರಮವಹಿಸಲು ನಿರ್ಧರಿಸಿತು.<br>ಮುಂದುವರೆದು, ಪಂಡಿತ ದೀನ ದಯಾಳ್ ಉಪಾಧ್ಯಾಯ ಸೌಹಾರ್ದ ವಸತಿನಿಲಯಗಳಿಗೆ ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಹಸ್ತಾಂತರವಾದಲ್ಲಿ, ನಂತರ ಪ್ರತ್ಯೇಕ ಕಟ್ಟಡಗಳಿಗೆ (Block) ಹೆಸರಿಸಲು ಕ್ರಮ ವಹಿಸಲು ನಿರ್ಧರಿಸಲಾಯಿತು. |

| ಕಟ್ಟಡ/ರಸ್ತೆಗಳ ಹೆಸರು | ಪ್ರಸ್ತಾವಿತ ಹೆಸರು |
|---|---|
| ಆಡಳಿತ ಸೌಧ | ಸಾಂಸ್ಕೃತಿಕ ನಾಯಕ ಬಸವೇಶ್ವರ ಆಡಳಿತ ಸೌಧ |
| ಪರೀಕ್ಷಾಂಗ ಭವನ | ಬುದ್ಧ ಪರೀಕ್ಷಾ ಭವನ |
| ಗ್ರಂಥಾಲಯ | ಡಾ. ಬಿ.ಆರ್.ಅಂಬೇಡ್ಕರ ರಾಷ್ಟ್ರೀಯ ಗ್ರಂಥಾಲಯ & ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ |
| ಗ್ರಂಥಾಲಯ ಸಂಪರ್ಕಿಸುವ ರಸ್ತೆ | ಡಾ. ಎಸ್.ಆರ್.ರಂಗನಾಥನ್ ಮಾರ್ಗ |
| ಮುಖ್ಯ ರಸ್ತೆ | a) ಎ.ಪಿ.ಎಂ.ಸಿ ಇಂದ ವಿಜ್ಞಾನ ಸಂಗಮ ಆವರಣ- ಬಂಧುತ್ವ ಮಾರ್ಗ<br>b) ಬೆಂಡಿಗೇರಿಯಿಂದ ವಿಜ್ಞಾನ ಸಂಗಮ ಆವರಣ-ಡಾ. ಚಂದ್ರಶೇಖರ ಕಂಬಾರ ಮಾರ್ಗ<br>c) ವಿಜ್ಞಾನ ಸಂಗಮದ ಪ್ರವೇಶ ದ್ವಾರದಿಂದ ಆಡಳಿತ ಸೌಧದವರೆಗೆ- ಸಂಗೊಳ್ಳಿ ರಾಯಣ್ಣ ಮಾರ್ಗ |
| ಆಂತರಿಕ ರಸ್ತೆ | 1) ಬಸವರಾಜ ಕಟ್ಟಿಮನಿ ಮಾರ್ಗ<br>2) ಹರಡೇಕರ ಮಂಜಪ್ಪ ಮಾರ್ಗ |
| ಪಿ.ಎಂ-ಉಷಾ (ಮೇರು) ಕಟ್ಟಡ ರಸ್ತೆ | ಪಿ.ಎಂ-ಉಷಾ ಮಾರ್ಗ |
| ಗ್ರಂಥಾಲಯದ ಸಭಾಂಗಣ | ಸ್ವಾಮಿ ವಿವೇಕಾನಂದ ಸಭಾಂಗಣ |
| ಮುಖ್ಯ ಸಭಾಂಗಣ (ಪರೀಕ್ಷಾಂಗ) | ಸರ್. ಸಿದ್ದಪ್ಪ ಕಂಬಳಿ ಸಭಾ ಭವನ |
| | ಪ್ರೊ. ಬಿ. ಆರ್. ಅನಂತನ್ ವೇದಿಕೆ |
| ರಸಾಯನಶಾಸ್ತ್ರ ವಿಭಾಗ ಮತ್ತು ಭೌತಶಾಸ್ತ್ರ ವಿಭಾಗ | 1. ಪ್ರೊ. ಸಿ. ಎನ್. ಆರ್ ರಾವ್ ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೊಧನಾ ವಿಭಾಗ<br>2. ಸರ್ ಸಿ. ವಿ ರಾಮನ್ ಸಭಾಂಗಣ |
| ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗ | 1. ಆಚಾರ್ಯ ಜಗದೀಶ ಚಂದ್ರ ಬೋಸ್ ಭವನ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೊಧನಾ ವಿಭಾಗ<br>2. ಡಾ. ಸಲೀಂ ಅಲಿ ಸಭಾಂಗಣ |

| | | | | |
|---|---|---|---|---|
| | | ಭೂಗೋಳಶಾಸ್ತ್ರ ವಿಭಾಗ ಅಪರಾಧಶಾಸಸ್ತ್ರ ಮತ್ತು ಅಪರಾಧಿಕ ನ್ಯಾಯಿಕ ವಿಭಾಗ | 1. ಪ್ರೊ. ಎಸ್. ಪಿ. ಚಟರ್ಜಿ ಭೂಗೋಳಶಾಸ್ತ್ರ ಮತ್ತು ಅಪರಾಧಶಾಸ್ತ್ರ ಮತ್ತು ಅಪರಾಧಿಕ ನ್ಯಾಯಿಕ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | |
| | | | 2. ಹೇಮಚಂದ್ರ ಬೋಸ್ ಮತ್ತು ಖಾಜಿ ಅಜೀಜುಲ್ ಹಕ್ ಸಭಾಂಗಣ | |
| | | ಗಣಿತಶಾಸ್ತ್ರ ಮತ್ತು ಗಣಕವಿಜ್ಞಾನ ವಿಭಾಗ | 1. ಶ್ರೀನಿವಾಸ್ ರಾಮಾನುಜನ್ ಗಣಿತಶಾಸ್ತ್ರ ಮತ್ತು ಗಣಕವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | |
| | | | 2. ಡಾ. ಡಿ. ಸಿ. ಪಾವಟೆ ಸಭಾಂಗಣ | |
| | | Eleveted level surface reservoir (ELSR) | ಅಬ್ದುಲ್ ನಜೀರ್ ಸಾಭ್ ಜಲ ಧಾಮ | |
| | | CSARC | ಭಾರತ ರತ್ನ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಕೇಂದ್ರಿಯ ವಿಜ್ಞಾನ ಸುಧಾರಿತ ಸಂಶೊಧನಾ ಕೇಂದ್ರ (CSARC) | |
| | | CSARC ಸಭಾಂಗಣ | ಎಸ್. ಜಿ. ಬಾಳೇಕುಂದ್ರಿ, ಸಭಾಂಗಣ | |
| | | Language skill Lab | ರಾಷ್ಟ್ರಕವಿ ಕುವೆಂಪು ಭಾಷಾ ಕೌಶಲ್ಯ ಪ್ರಯೋಗಾಲಯ | |
| | | AI Lab | ಡಾ. ಸುಧಾ ಮೂರ್ತಿ ಕೃತಕ ಬುದ್ಧಿಮತ್ತೆ ಮತ್ತು ನವೋನ್ಮೇಷ ಕೇಂದ್ರ | |

| **ವಿದ್ಯಾರ್ಥಿಗಳ ವಸತಿ ನಿಲಯ** | |
|---|---|
| **Block** | |
| A | ರಾಷ್ಟ್ರಕವಿ ಕುವೆಂಪು ಬ್ಲಾಕ್ |
| B | ದ. ರಾ. ಬೇಂದ್ರೆ ಬ್ಲಾಕ್ |
| C | ಸರ್ ಸಯ್ಯದ ನಿಸಾರ ಅಹ್ಮದ ಖಾನ್ ಬ್ಲಾಕ್ |
| **ವಿದ್ಯಾರ್ಥಿನಿಯರ ವಸತಿ ನಿಲಯ** | |
| **Block** | |
| A | ಬೆಳವಡಿ ಮಲ್ಲಮ್ಮ ಬ್ಲಾಕ್ |
| B | ಸಾವಿತ್ರಿಬಾಯಿ ಫುಲೆ ಬ್ಲಾಕ್ |
| C | ಸರೋಜಿನಿ ನಾಯ್ಡು ಬ್ಲಾಕ್ |

| | | |
|---|---|---|
| 04 | 2026/07/04 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಿದ್ದಕ್ಕೆ ಸಭೆಯ ಅನುಸಮರ್ಥನೆ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಿರುವ ನೇಮಕಾತಿ ಆದೇಶಗಳಿಗೆ ಸಭೆಯು ಅನುಸಮರ್ಥನೆ ನೀಡಿತು. |

| **ಕ್ರ.ಸಂ** | **ವಿಭಾಗದ ಹೆಸರು** | **ಅಧ್ಯಕ್ಷರು** |
|---|---|---|
| 1 | ಅರ್ಥಶಾಸ್ತ್ರ ವಿಭಾಗ | ಡಾ. ಕಿರಣಕುಮಾರ ಪಿ., ಸಹ ಪ್ರಾಧ್ಯಾಪಕರು ಇವರಿಗೆ ದಿನಾಂಕ: 28-07-2026 ರಿಂದ ಅನ್ವಯವಾಗುವಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. |
| 2 | ಗಣಿತಶಾಸ್ತ್ರ ವಿಭಾಗ | ಪ್ರೊ. ವಿಶ್ವನಾಥ. ಬಿ. ಅವಟಿ, ಪ್ರಾಧ್ಯಾಪಕರು ಇವರಿಗೆ ದಿನಾಂಕ: 28-05-2026 ರಿಂದ ಅನ್ವಯವಾಗುವಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. |

| | | |
|---|---|---|
| 05 | 2026/07/05 | ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸಲು, ಶೈಕ್ಷಣಿಕ ಕಾರ್ಯಗಾರಗಳಲ್ಲಿ ಭಾಗವಹಿಸಲು ಹಾಗೂ ಫೆಲೋಶೀಪ್ (Fellowship) ಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿರುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸಲು, ಶೈಕ್ಷಣಿಕ ಕಾರ್ಯಗಾರಗಳಲ್ಲಿ ಭಾಗವಹಿಸಲು ಹಾಗೂ ಫೆಲೋಶೀಪ್ (Fellowship) ಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು. |

| **Sl No** | **Name of the Teaching Staff** | **Details of permission to apply** | **Post applied/Subject** |
|---|---|---|---|
| | | **ನಿರಾಕ್ಷೇಪಣಾ ಪ್ರಮಾಣ ಪತ್ರ** | |
| 1 | Prof. Basavaraj Padmashali Senior Professor, Department of Chemistry. | 1. Davangere University, Shivagangotri, Davangere.<br>2. Bangalore University, Bangaluru, Karnataka.<br>3. Central University of Karnataka, Kalaburagi.<br>4. Mahatma Gandhi Rural Development Panchayat Raj University, Gadag. | Vice-Chancellor |
| 2 | Prof. V. F. Nagannawar<br>Senior Professor<br>Department of English | 1. Central University of South Bihar, Gaya, Bihar.<br>2. North Eastern Hill University, Shilong , Meghalaya.<br>3. Davangere University, Shivagangotri, Davangere.<br>4. Central University of Karnataka, Kalaburagi.<br>5. Guru Ghasidas Vishwavidyalaya Bilaspur, Chhattisgarh.<br>6. Central University of Himachal Pradesh, Dharmashala, Himachal Pradesh<br>7. Maulana Azad National Urdhu University Ganchibowli, Hyderabad.<br>8. Central University of Jammu, Bagla Suchani, Jammu and Kashmir.<br>9. Central University of Haryana, Mahendergarh, Haryana | Vice-Chancellor |

| | | | |
|---|---|---|---|
| 3 | Prof. D. N. Patil<br>Senior Professor<br>Department of Economics | 1. Davangere University, Shivagangotri, Davangere. | Vice-Chancellor |
| 4 | Prof. S. M. Gangadharaiah<br>Professor<br>Department of Classical Kannada | 1. Bangalore University, Bangaluru, Karnataka.<br>2. Davangere University, Shivagangotri, Davangere.<br>3. Kannada University, Hampi | Vice-Chancellor |
| Fellowship ಅಧ್ಯಯನಕ್ಕಾಗಿ ಅರ್ಜಿ ಸಲ್ಲಿಸಲು ಮತ್ತು ಶೈಕ್ಷಣಿಕ ಕಾರ್ಯಾಗಾರದಲ್ಲಿ ಭಾಗವಹಿಸಲು ಅನುಮತಿ ನೀಡಿರುವ ವಿವರ. | | | |
| 5 | Prof. Nagaratna Parande<br>Professor<br>Department of English | The United States –India Education Foundation-USA | Fulbright-Nehru Fellowship Application-2027-28 |
| | | Merton College, University of Oxford, United Kingdom & Visit to places of educational knowledge and cultural significance in London. | T. S. Eliot International Summer School (04-07-2026 to 30-07-2026) |

| | | |
|---|---|---|
| 06 | 2026/07/06 | ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳು ವಯೋನಿವೃತ್ತಿ ಹೊಂದುತ್ತಿರುವುದರಿಂದ ಇವರಿಗೆ ಸೇವಾ ವಯೋ ನಿವೃತ್ತಿ ನೋಟೀಸ್ ಜಾರಿಗೊಳಿಸುವ ಹಾಗೂ ವಯೋ ನಿವೃತ್ತಿ ಸೌಲಭ್ಯಗಳನ್ನು ಮಂಜೂರಿಸುವ ಕುರಿತು. |
| | **ತೀರ್ಮಾನ** | ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಾಣಿಸಿದ ಬೋಧಕೇತರ ಸಿಬ್ಬಂದಿಗಳು ವಯೋನಿವೃತ್ತಿ ಹೊಂದುತ್ತಿರುವುದರಿಂದ ಇವರಿಗೆ ಸೇವಾ ವಯೋ ನಿವೃತ್ತಿ ನೋಟೀಸ್ ಜಾರಿಗೊಳಿಸುವ ಹಾಗೂ ವಯೋ ನಿವೃತ್ತಿ ಸೌಲಭ್ಯಗಳನ್ನು ಮಂಜೂರಾತಿಸಲು ಸಭೆಯು ಅನುಮೋದನೆ ನೀಡಿತು. |

| ಕ್ರ.ಸಂ | ಸಿಬ್ಬಂದಿ ಹೆಸರು | ಹುದ್ದೆ | ನಿವೃತ್ತಿ ದಿನಾಂಕ |
|---|---|---|---|
| 1 | ಶ್ರೀ. ಅಶೋಕ ಯಲ್ಲಪ್ಪ ತಳವಾರ | ಮೇಸ್ತ್ರಿ | 30-04-2027 |
| 2 | ಶ್ರೀ. ಶ್ರೀರಾಮು ನಾಗಪ್ಪ ಹರಿಜನ | ಜಾಡಮಾಲಿ | 31-07-2027 |

| | | |
|---|---|---|
| 07 | 2026/07/07 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ **"ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀ ಬಸವೇಶ್ವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,"** ಪ್ರಾರಂಭಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿರುವ ಕುರಿತು. |
| | **ತೀರ್ಮಾನ** | 1) ಕನ್ನಡ ನಾಡಿನ ಮಹಾನ್ ಸಮಾಜ ಸುಧಾರಕರು, ತತ್ವಜ್ಞಾನಿಗಳು ಹಾಗೂ ಮಾನವತಾವಾದಿಗಳು ಆಗಿರುವ ವಿಶ್ವಗುರು ಶ್ರೀ ಬಸವೇಶ್ವರರು ಸಮಾನತೆ, ಶ್ರಮದ ಮಹತ್ವ, ಮಹಿಳಾ ಸಬಲೀಕರಣ, ಸಾಮಾಜಿಕ ನ್ಯಾಯ ಹಾಗೂ ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಜಗತ್ತಿಗೆ ಸಾರಿದ ಮೊದಲ ಮಹನೀಯರು. ಅವರ "ಕಾಯಕವೇ ಕೈಲಾಸ ಮತ್ತು ಸಮಾನತೆ, ಸಹಬಾಳ್ವೆ ಮಾನವತೆ ತತ್ವಗಳನ್ನು ಯುವಜನರಲ್ಲಿ ಬೆಳೆಸಲು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಶ್ರೀ. ಬಸವೇಶ್ವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಪ್ರಾರಂಭಿಸಲು ಸಭೆಯು ತೀರ್ಮಾನಿಸಿ ಸರ್ಕಾರಕ್ಕೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲು ಹಾಗೂ ರೂ. 1 ಕೋಟಿಯನ್ನು ಆಂತರಿಕ ಮೊತ್ತ ಠೇವಣಿ ಇಡುವುದು ಹಾಗೂ ಅದರಿಂದ ಬಂದ ಬಡ್ಡಿ ಮೊತ್ತದಲ್ಲಿ ಕಾರ್ಯಕ್ರಮ ರೂಪಿಸಲು ಮತ್ತು ದಾನಿಗಳಿಂದ ಅಗತ್ಯ ನಿಧಿ ಸಂಗ್ರಹಿಸಿ ಬಸವೇಶ್ವರ ಅಧ್ಯಯನ ಕೇಂದ್ರ ಮತ್ತು ಸಂಶೋಧನಾ ಕೇಂದ್ರವನ್ನು ಬಲಪಡಿಸಲು ಸಭೆಯು ತೀರ್ಮಾನಿಸಿತು. |

<table>
<tr><td></td><td></td><td>2) ಸದರಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ" ವನ್ನು ಉದ್ಘಾಟನೆ ಮಾಡಲು ಸಲಹಾ ಸಮಿತಿ ರಚಿಸಿ, ನಿರ್ದೇಶಕರ ಮತ್ತು ಸದಸ್ಯರ ನೇಮಕ ಮಾಡಿ, ಸಭೆ ನಡೆಸುವುದು, ಸದರಿ ಸಭೆಯಲ್ಲಿ ಯಾವ ತರಹದ ಕಾರ್ಯಕ್ರಮಗಳನ್ನು ಮಾಡಬೇಕೆಂಬುದನ್ನು ವಿಸ್ತೃತವಾಗಿ ಚರ್ಚೆ ಮಾಡಿ ಆನಂತರ ಬಸವ ವೇದಿಕೆ ಬಳಕೆಗೆ ಕ್ರಮವಹಿಸುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.</td></tr>
<tr><td>08</td><td>2026/07/08</td><td>ಎಂ.ಬಿ.ಎ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗೆ ಪಾಸ್‌ಪೋರ್ಟ್‌ಗೆ (Passport) ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಮತ್ತು ಸೇವಾ ಪ್ರಮಾಣ ಪತ್ರ ನೀಡಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ಎಂ.ಬಿ.ಎ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಾಣಿಸಿದ ಬೋಧಕೇತರ ಸಿಬ್ಬಂದಿಗೆ ಪಾಸ್‌ಪೋರ್ಟ್‌ಗೆ (Passport) ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಮತ್ತು ಸೇವಾ ಪ್ರಮಾಣ ಪತ್ರ ನೀಡಿರುವ ಕುರಿತು ಸಭೆಯು ಅನುಸಮರ್ಥನೆ ನೀಡಿತು.
<table>
<tr><th>ಕ್ರ.ಸಂ</th><th>ಬೋಧಕೇತರ ಸಿಬ್ಬಂದಿಯ ಹೆಸರು</th><th>ಹುದ್ದೆ</th><th>ಕಾರ್ಯನಿರ್ವಹಿಸುತ್ತಿರುವ ವಿಭಾಗ</th></tr>
<tr><td>1</td><td>ಶ್ರೀ. ಸಂತೋಷ ನಾಟಿಕರ</td><td>ದ್ವಿತೀಯ ದರ್ಜೆ ಸಹಾಯಕರು</td><td>ಎಂ.ಬಿ.ಎ ವಿಭಾಗ</td></tr>
</table></td></tr>
<tr><td>09</td><td>2026/07/09</td><td>ಕರಡು ಪರಿನಿಯಮಗಳನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ಈ ಕೆಳಕಾಣಿಸಿದ 3 ಕರಡು ಪರಿನಿಯಮಾವಳಿಗಳ ಪ್ರತಿಗಳನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.
<table>
<tr><th>ಕ್ರ.ಸಂ</th><th>ಪರಿನಿಯಮಾವಳಿಯ ಹೆಸರು</th></tr>
<tr><td>1</td><td>Statute Governing Cadre, Recruitment and Promotion of Non-Teaching, Technical and Ministrial Staff in Rani Channamma University, 2002.</td></tr>
<tr><td>2</td><td>Statute Governing Kitturu Rani Channamma University Employees Service (Conduct) Rule-2026.</td></tr>
<tr><td>3</td><td>Statute Governing Kitturu Rani Channamma University Employee's classification, Control and appeal rules-2026.</td></tr>
</table></td></tr>
<tr><td>10</td><td>2026/07/10</td><td>ಶ್ರೀ. ಮಾದನಭಾವಿ ಈರಣ್ಣ, ಪ್ರಥಮ ದರ್ಜೆ ಸಹಾಯಕರು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿಗೆ ವರ್ಗಾಯಿಸುವಂತೆ ವಿನಂತಿಸಿಕೊಂಡಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆರ್.ಟಿ.ಆಯ್ ಮತ್ತು ಕಾನೂನು ಕೋಶದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಾದನಭಾವಿ ಈರಣ್ಣ ಇವರು ತಾನು ಮೂಲತಃ ಧಾರವಾಡ ಜಿಲ್ಲೆಯ ನವಲೂರ ಗ್ರಾಮದ ನಿವಾಸಿಯಾಗಿದ್ದೇನೆ. ತನ್ನ ತಾಯಿಯವರಿಗೆ 68 ವರ್ಷ ವಯಸ್ಸಾಗಿದ್ದು, ರಕ್ತದೊತ್ತಡ, ಸಕ್ಕರೆ ಕಾಯಿಲೆ, ದೃಷ್ಟಿ ಹಾಗೂ ವಯೋಸಹಜ ಕಾಯಿಲೆಯಿಂದಾಗಿ ಅನಾರೋಗ್ಯ ಪೀಡಿತರಾಗಿರುತ್ತಾರೆ. ಅವರ ನಿತ್ಯ ಚಿಕಿತ್ಸಾ ಪ್ರಕ್ರಿಯೆ, ದಿನನಿತ್ಯದ ಆರೈಕೆಗೆ ಸಂಪೂರ್ಣವಾಗಿ ತನ್ನ ಮೇಲೆಯೇ ಅವಲಂಬಿತರಾಗಿದ್ದು ಅವರಿಗೆ ತನ್ನ ಅವಶ್ಯಕತೆಯಿರುವುದರಿಂದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ವರ್ಗಾವಣೆಯಾಗಲು ನಿರಾಕ್ಷೇಪಣಾ ಪ್ರಮಾಣ ಪತ್ರ, (No Objection Certificate) ನೀಡುವಂತೆ ವಿನಂತಿಸಿಕೊಂಡಿರುವ ವಿಷಯ ಕುರಿತು ಚರ್ಚಿಸಿದ ಸಭೆಯು ಸದರಿ ಸಿಬ್ಬಂದಿಯವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (NOC) ಪಡೆದು ಸಲ್ಲಿಸಿದ ನಂತರ ಮುಂದಿನ ಕ್ರಮಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.</td></tr>
</table>

| | | |
|---|---|---|
| 11 | 2026/07/11 | ಪ್ರೊ. ಎನ್. ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ ಇವರು ವಿವಿಧ ವಿಶ್ವವಿದ್ಯಾಲಯಗಳಿಗೆ ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ (NOC) ಹಾಗೂ ಇಲಾಖಾ/ಕ್ರಿಮಿನಲ್ ವಿಚಾರಣೆ ಬಗ್ಗೆ Vigilance Certificate ನೀಡಲು ವಿನಂತಿಸಿರುವ ಮನವಿಗೆ ಹಿಂಬರಹ ನೀಡಿರುವುದಕ್ಕೆ ಸಿಂಡಿಕೇಟ್ ಸಭೆ ಅನುಸಮರ್ಥನೆ ನೀಡುವ ಕುರಿತು. |
| | **ತೀರ್ಮಾನ** | ಪ್ರೊ. ಎನ್. ಮಾರುತಿರಾವ, ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ ಇವರು ವಿವಿಧ ವಿಶ್ವವಿದ್ಯಾಲಯಕ್ಕೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ (NOC) ಹಾಗೂ Vigilance Clearance Certificate ಈ ಕೆಳಗಿನಂತಿರುತ್ತದೆ. |

| ಕ್ರ.ಸಂ | ವಿಶ್ವವಿದ್ಯಾಲಯದ ಹೆಸರು |
|---|---|
| 1 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 2 | ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ |
| 3 | ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ ಬೆಂಗಳೂರು |
| 4 | Central University of Karnataka. |
| 5 | North Eastern Hill University, Shillong. |

ಮುಂದುವರೆದು, ದಿನಾಂಕ: 06/04/2026 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸಭೆ ತೀರ್ಮಾನಿಸಿದ್ದು, ಇಲಾಖಾ ವಿಚಾರಣೆ ನಡೆಸುವುದು ಬಾಕಿ ಇರುವ ಕಾರಣದಿಂದ ಸದರಿಯವರು ಈ ಮೇಲೆ ತೋರಿಸಿದ ವಿವಿಧ ವಿಶ್ವವಿದ್ಯಾಲಯಕ್ಕೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ವಿನಂತಿಸಿರುವ ಮನವಿಗಳನ್ನು ತಿರಸ್ಕರಿಸಿ ಹಿಂಬರಹವನ್ನು ನೀಡಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು.

| | | |
|---|---|---|
| 12 | 2026/07/12 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳಿಗೆ ಸಿ.ಎ.ಎಸ್. (CAS) ಅಡಿಯಲ್ಲಿ ವೃತ್ತಿ ಪದೋನ್ನತಿಗಾಗಿ ಆಯ್ಕೆ ಸಮಿತಿ ನೀಡಿರುವ ವರದಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ 25 ಅಧ್ಯಾಪಕರುಗಳಿಗೆ ಸಿ.ಎ.ಎಸ್. (CAS) ಅಡಿಯಲ್ಲಿ ವೃತ್ತಿ ಪದೋನ್ನತಿಗಾಗಿ ಆಯ್ಕೆ ಸಮಿತಿ ನೀಡಿರುವ ವರದಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದ್ದು, ಸುಧೀರ್ಘವಾಗಿ ಚರ್ಚಿಸಿ ಪರಿಣಿತ ಸಮಿತಿಯು ನೀಡಿರುವ ಷರತ್ತುಗಳನ್ನು ಅಳವಡಿಸಿ ಈ ಕೆಳಕಾಣಿಸಿದಂತೆ 25 ಅಧ್ಯಾಪಕರುಗಳಿಗೆ CAS ಪದೋನ್ನತಿ ನೀಡಲು ಸಭೆಯು ಅನುಮೋದನೆ ನೀಡಿತು. |

| ಅ.ಸಂ | ಹೆಸರು ಮತ್ತು ವಿಭಾಗ | ಪದೋನ್ನತಿ ಹಂತ ಮತ್ತು ಅರ್ಹತಾ ದಿನಾಂಕ |
|---|---|---|
| 1 | ಡಾ. ಸಿ. ಎಂ. ವಾಘಮಾರೆ<br>ಪ್ರಾಧ್ಯಾಪಕರು, ಮರಾಠಿ ವಿಭಾಗ. | ಹಿರಿಯ ಪ್ರಾಧ್ಯಾಪಕರ ಹಂತ |
| 2 | ಡಾ. ಅರ್ಜುನ ಕೆ. ಜಂಬಗಿ<br>ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸಂ.ರಾ.ಪ್ರ.ದ.ಫ. ಬೆಳಗಾವಿ | ಪ್ರಾಧ್ಯಾಪಕರ ಹಂತ |
| 3 | ಡಾ. ಕನಕಪ್ಪ ಪೂಜಾರ<br>ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 4 | ಡಾ. ಮುಕುಂದ ಎಂ. ಮುಂಡರಗಿ<br>ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂ |

| | | |
|---|---|---|
| 5 | ಡಾ. ಭವಾನಿಶಂಕರ ನಾಯ್ಕ ಬಿ.<br>ಉಪಗ್ರಂಥಪಾಲಕರು, ಗ್ರಂಥಾಲಯ ವಿಭಾಗ | ಉಪಗ್ರಂಥಪಾಲಕರ ಹಂತ<br>(13A to 14) |
| 6 | ಡಾ. ಸುಮಂತ ಎಸ್. ಹಿರೇಮಠ<br>ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ | ಪ್ರಾಧ್ಯಾಪಕರ ಹಂತ |
| 7 | ಡಾ. ಮಲ್ಲಮ್ಮ ವಿ. ರೆಡ್ಡಿ<br>ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 8 | ಡಾ. ರಮೇಶ ಬಿ. ಕುರಿ<br>ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 9 | ಡಾ. ಹನುಮಂತಪ್ಪ ಡಿ. ಜಿ.,<br>ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 10 | ಡಾ. ಕಮಲಾಕ್ಷಿ ಜಿ. ತಡಸದ<br>ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ | ಹಿರಿಯ ಪ್ರಾಧ್ಯಾಪಕರ ಹಂತ |
| 11 | ಡಾ. ರವಿ ದಳವಾಯಿ<br>ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ | ಪ್ರಾಧ್ಯಾಪಕರ ಹಂತ |
| 12 | ಡಾ. ವಿಶ್ವನಾಥ ಬಿ. ಅವಟಿ<br>ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ | ಹಿರಿಯ ಪ್ರಾಧ್ಯಾಪಕರ ಹಂತ |
| 13 | ಡಾ. ಪಿ. ನಾಗರಾಜ<br>ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ | ಸಹ ಪ್ರಾಧ್ಯಾಪಕರ ಹಂತ |
| 14 | ಡಾ. ಮಂಜುನಾಥ ಕೆ.<br>ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 15 | ಡಾ. ಸಚೀಂದ್ರ ಜಿ. ಆರ್.,<br>ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 16 | ಡಾ. ಅಶ್ವಿನಿ ಜಾಮುನಿ<br>ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 17 | ಡಾ. ಸುಮನ ಮುದ್ದಾಪುರ<br>ಕಾಲೇಜು ಗ್ರಂಥಪಾಲಕರು, ಸಂ.ರಾ.ಪ್ರ.ದ.ಫ. ಬೆಳಗಾವಿ | ಕಾಲೇಜು ಗ್ರಂಥಪಾಲಕರ ಹಂತ<br>(13A to 14) |
| 18 | ಡಾ. ಎಸ್. ಎಂ. ಗಂಗಾಧರಯ್ಯಾ,<br>ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ | ಹಿರಿಯ ಪ್ರಾಧ್ಯಾಪಕರ ಹಂತ |
| 19 | ಡಾ. ಚಂದ್ರಶೇಖರ ಸಿ. ಬನಸೋಡೆ<br>ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 20 | ಡಾ. ಪಿ. ಎಂ. ಗುರುಬಸವರಾಜ<br>ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 21 | ಡಾ. ಎಂ. ಬಿ. ಶ್ರೀಧರ<br>ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 22 | ಪ್ರೊ. ಮನಿಷಾ ನೇಸರಕರ್<br>ಪ್ರಾಧ್ಯಾಪಕರು, ಮರಾಠಿ ವಿಭಾಗ | ಹಿರಿಯ ಪ್ರಾಧ್ಯಾಪಕರ ಹಂತ |
| 23 | ಡಾ. ಮಹೇಶ ಕುಮಾರ ಎನ್,<br>ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 24 | ಡಾ. ಸಂತೋಷ ಪಾಟೀಲ<br>ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ | ಸಹ ಪ್ರಾಧ್ಯಾಪಕರ ಹಂತ |
| 25 | ಡಾ. ವಿದ್ಯಾಸಾಗರ ಸಿ. ಸಿ.,<br>ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರ ಹಂತ |

| | | |
|---|---|---|
| 13 | 2026/07/13 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ವಿಜಯಪುರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳ ನಿಗದಿತ ವೇತನವನ್ನು ಪರಿಷ್ಕರಿಸಿ ಹೆಚ್ಚಿಸುವ ಬಗ್ಗೆ. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ವಿಜಯಪುರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸ್ನಾತಕ (UG) ಮತ್ತು ಸ್ನಾತಕೋತ್ತರ (PG) ಅಧ್ಯಯನ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳ ನಿಗದಿತ ವೇತನವನ್ನು ಸರ್ಕಾರದ ಆದೇಶ ದಿನಾಂಕ: 04-03-2024 ರನ್ವಯ, ಈ ಕೆಳಕಾಣಿಸಲಾದ ಷರತ್ತುಗಳೊಂದಿಗೆ ವೇತನ ಪರಿಷ್ಕರಿಸಲು ಸಭೆಯು ಅನುಮೋದನೆ ನೀಡಿತು.<br><br>**ಷರತ್ತುಗಳು:**<br>1. ಸೇವಾವಧಿ ಕುರಿತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಲಾಗುವುದು ಮತ್ತು ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿದ ಉಪನ್ಯಾಸಕರು, ಸದರಿ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿದ ನೈಜತೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು. |

| ಕ್ರ. ಸಂ. | ವಿದ್ಯಾರ್ಹತೆ | ಸೇವಾ ಅವಧಿ (Break in service ಸೇರಿದಂತೆ) | ಸರ್ಕಾರ ಪ್ರಸ್ತುತ ನಿಗದಿಪಡಿಸಿರುವ ವೇತನ (ಆದೇಶ: 04-03-2024 ರಂತೆ) | ವಿ.ವಿ.ಯಲ್ಲಿ ಪ್ರಸ್ತುತ ನೀಡಲಾಗುತ್ತಿರುವ ವೇತನ (ರೂ.) | ಪರಿಷ್ಕರಿಸಿ ಹೆಚ್ಚಿಸಬೇಕಾಗಿರುವ ಪ್ರಸ್ತಾವಿತ ವೇತನ (ರೂ.) |
|---|---|---|---|---|---|
| 1 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದವರಿಗೆ (UGC) | 05 ವರ್ಷಕ್ಕಿಂತ ಕಡಿಮೆ ಸೇವಾವಧಿ ಸಲ್ಲಿಸಿರುವವರಿಗೆ | ರೂ. 35,000/- | ರೂ. 32,000/- (PG & UG) | **35,000/-** |
| | | 05 ರಿಂದ 10 ವರ್ಷ ಸೇವೆ ಸಲ್ಲಿಸಿದವರಿಗೆ | ರೂ.38,000 /- | ರೂ. 34,000/- (PG & UG) | **38,000/-** |
| | | 10 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ | ರೂ. 39,000/- | ರೂ. 34,000/- (PG) & ರೂ. 38,000/- (UG) | **40,000/-** |
| 2 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ (Non-UGC) | 05 ವರ್ಷಕ್ಕಿಂತ ಕಡಿಮೆ ಸೇವಾವಧಿ ಸಲ್ಲಿಸಿರುವವರಿಗೆ | ರೂ.31,000 /- | ರೂ. 28,000/- (PG) & ರೂ. 28,500/- (UG) | **32,000/-** |
| | | 05 ರಿಂದ 10 ವರ್ಷ ಸೇವೆ ಸಲ್ಲಿಸಿದವರಿಗೆ | ರೂ. 34,000/- | ರೂ. 30,000/- (PG) ರೂ. 31,000/- (UG) | **34,000/-** |
| | | 10 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ | ರೂ. 35,000/- | - | **36,000/-** |

| ಕ್ರ. ಸಂ. | ವಿದ್ಯಾರ್ಹತೆ | ಸೇವಾ ಅವಧಿ (Break in service ಸೇರಿದಂತೆ) | ಸರ್ಕಾರ ಪ್ರಸ್ತುತ ನಿಗದಿಪಡಿಸಿರುವ ವೇತನ (ಆದೇಶ: 04-03-2024 ರಂತೆ) | ವಿ.ವಿ.ಯಲ್ಲಿ ಪ್ರಸ್ತುತ ನೀಡಲಾಗುತ್ತಿರುವ ವೇತನ (ರೂ.) | ಪರಿಷ್ಕರಿಸಿ ಹೆಚ್ಚಿಸಬೇಕಾಗಿರುವ ಪ್ರಸ್ತಾವಿತ ವೇತನ (ರೂ.) |
|---|---|---|---|---|---|
| 1 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದವರಿಗೆ (UGC) | 05 ವರ್ಷಕ್ಕಿಂತ ಕಡಿಮೆ ಸೇವಾವಧಿ ಸಲ್ಲಿಸಿರುವವರಿಗೆ | ರೂ. 17,500/- | ರೂ. 16,000/- (PG & UG) | **17,500/-** |
| | | 05 ರಿಂದ 10 ವರ್ಷ ಸೇವೆ ಸಲ್ಲಿಸಿದವರಿಗೆ | ರೂ. 19,000/- | ರೂ. 17,000/- (PG & UG) | **19,000/-** |
| | | 10 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ | ರೂ. 19,500/- | ರೂ. 17,000/- (PG)<br>ರೂ. 19,000/- (UG) | **20,000/-** |
| 2 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ (Non-UGC) | 05 ವರ್ಷಕ್ಕಿಂತ ಕಡಿಮೆ ಸೇವಾವಧಿ ಸಲ್ಲಿಸಿರುವವರಿಗೆ | ರೂ. 15,500/- | ರೂ. 14,000/- (PG )<br>ರೂ. 14,250/- (UG) | **16,000/-** |
| | | 05 ರಿಂದ 10 ವರ್ಷ ಸೇವೆ ಸಲ್ಲಿಸಿದವರಿಗೆ | ರೂ. 17,000/- | ರೂ. 15,000/- (PG)<br>ರೂ. 15,550/- (UG) | **17,000/-** |
| | | 10 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ | ರೂ. 17,500/- | - | **18,000/-** |

| | | |
|---|---|---|
| 14 | 2026/07/14 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವ ಕುರಿತು ನಿಯಮಾವಳಿ ರಚಿಸುವ ಬಗ್ಗೆ. |
| | **ತೀರ್ಮಾನ** | ಶಿಕ್ಷಕೇತರ ನೌಕರರ ಸಂಘ, ಕಿರಾಚವಿವಿ, ಬೆಳಗಾವಿ ಇವರ ವತಿಯಿಂದ ಶಿಕ್ಷಕೇತರ ನೌಕರರ ಹಿತಾಸಕ್ತಿ, ಆಡಳಿತಾತ್ಮಕ ಪಾರದರ್ಶಕತೆ, ಕಾರ್ಯಕ್ಷಮತೆ ಹಾಗೂ ವಿಶ್ವವಿದ್ಯಾಲಯದ ಉತ್ತಮ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಶಿಕ್ಷಕೇತರ ನೌಕರರನ್ನು ಮೂರು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ವರ್ಗಾವಣೆ ಮಾಡುವ ನೀತಿಯನ್ನು ಜಾರಿಗೊಳಿಸುವಂತೆ ವಿನಂತಿಸಿರುವ ವಿಷಯ ಕುರಿತು ಚರ್ಚಿಸಿದ ಸಭೆಯು, ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿ ಒಂದೇ ವಿಭಾಗ/ಒಂದೇ ಸ್ಥಳ/ಒಂದೇ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಸಾರ್ವತ್ರಿಕ ವರ್ಗಾವಣೆಯಲ್ಲಿ ಪರಿಗಣಿಸಲು ಹಾಗೂ ಇದಕ್ಕೆ ಸೂಕ್ತ ನಿಯಮಾವಳಿ ರಚಿಸಲು ಸಭೆಯು ಅನುಮೋದನೆ ನೀಡಿತು. |
| 15 | 2026/07/15 | ಶ್ರೀಮತಿ. ಶಿಲ್ಪಾ ದಾನಪ್ಪನವರ, ಪ್ರಥಮ ದರ್ಜೆ ಸಹಾಯಕರು, ಇವರ ವಿರುದ್ಧ ದೋಷಾರೋಪಣಾ ಪಟ್ಟಿ (ಅನುಬಂಧ 1 ರಿಂದ 4) ಜಾರಿಗೊಳಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ. ಶಿಲ್ಪಾ ದಾನಪ್ಪನವರ, ಪ್ರ.ದ.ಸ ಇವರು ಕೆಲಸದಲ್ಲಿ ನಿರ್ಲಕ್ಷ್ಯ ತೋರುತ್ತಿರುವ ಹಿನ್ನಲೆಯಲ್ಲಿ ದಿನಾಂಕ: 24-04-2026 ರಂದು ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದ್ದು, ಸದರಿ ನೋಟಿಸಿಗೆ ಉತ್ತರ ಕೊಡಲು 15 ದಿನ ಕಾಲಾವಕಾಶ ನೀಡುವಂತೆ ದಿ:04-05-2026 ರಂದು ವಿನಂತಿಸಿ, 15 ದಿನಗಳ ನಂತರ ಸದರಿಯವರು ಉತ್ತರ ನೀಡಿದ್ದು ಸದರಿ ಉತ್ತರಕ್ಕೆ ವಿಭಾಗದಿಂದ ವರದಿ ಪಡೆದುಕೊಂಡಿದ್ದು ಸದರಿ ವರದಿಯನ್ವಯ, ಕರ್ತವ್ಯಲೋಪಗಳ ಕುರಿತು ಇಲಾಖಾ ವಿಚಾರಣೆ ನಡೆಸಲು 1-4 ಅನುಬಂಧ ಸಿದ್ಧಪಡಿಸಿ, ಸದರಿಯವರ ಕುರಿತು ಆರೋಪ ಪಟ್ಟಿ ಜಾರಿಗೊಳಿಸಲು ಮಾನ್ಯ ಕುಲಪತಿಗಳು ಅನುಮೋದನೇ ನೀಡಿರುವ ವಿಷಯವನ್ನು ಸಭೆಗೆ ಮಂಡಿಸಲಾಯಿತು. |

| | | |
|---|---|---|
| | | ಚರ್ಚಿಸಿದ ಸಭೆಯು ಶ್ರೀಮತಿ. ಶಿಲ್ಪಾ ದಾನಪ್ಪನವರ, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ದ ದೋಷಾರೋಪಣಾ ಪಟ್ಟಿ (ಅನುಬಂಧ 1 ರಿಂದ 4) ಜಾರಿಗೊಳಿಸಲು ಸಭೆಯು ತೀರ್ಮಾನಿಸಿತು. |
| 16 | 2026/07/16 | ಪ್ರೊ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು ಮರಾಠಿ ವಿಭಾಗ ಇವರ ವಿರುದ್ದ ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸುವ ಕುರಿತು. |
| | **ತೀರ್ಮಾನ** | ಪ್ರೊ. ಮನೀಶಾ ನೇಸರಕರ, ಪ್ರಾಧ್ಯಾಪಕರು ಮರಾಠಿ ವಿಭಾಗ ಇವರು ಅದೇ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು ಇವರ ವಿರುದ್ಧ ಕೆಲ ಅಂಶಗಳನ್ನು ಉಲ್ಲೇಖಿಸಿ ಆಪಾದನೆ ಮಾಡಿ, ಅದರನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ವಿನಂತಿಸಿದ್ದರು. ಈ ಹಿನ್ನಲೆಯಲ್ಲಿ ಪ್ರೊ. ಸಿ. ಎನ್. ವಾಘಮಾರೆ ಇವರಿಗೆ ಸದರಿ ಆಪಾದನೆಗಳಿಗೆ ಸಂಬಂಧಿಸಿದಂತೆ ವಿವರಣೆ ಕೇಳಿ ಪತ್ರ ಜಾರಿಗೊಳಿಸಲಾಗಿತ್ತು. ಸದರಿ ಪತ್ರಕ್ಕೆ ಅವರು ಸಲ್ಲಿಸಿದ ವಿವರಣೆಯಲ್ಲಿ ತಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಗಳನ್ನು ನಿರಾಕರಿಸಿದ್ದರಿಂದ, ಸದರಿ ಪ್ರಕರಣದಲ್ಲಿ ಕಾನೂನು ಕೋಶದ ಅಭಿಪ್ರಾಯದಂತೆ ನ್ಯಾಯಯುತ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಓರ್ವ ನಿವೃತ್ತ ಜಿಲ್ಲಾ ನ್ಯಾಯಾದೀಶರನ್ನು ಏಕ ಸಮಿತಿ ಸದಸ್ಯರನ್ನು ವಿಚಾರಣೆಗಾಗಿ/ಸತ್ಯಾಸತ್ಯತೆ ತಿಳಿಯಲು ನೇಮಿಸಿ ಆದೇಶಿಸಲಾಗಿತ್ತು. ಸದರಿ ಸಮಿತಿಯು ಪ್ರಕರಣದ ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಅದರಲ್ಲಿ ಪ್ರೊ. ಮನೀಶಾ ನೇಸರಕರ್ ಇವರು ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸತ್ಯವೆಂದು ಕಂಡುಬಂದಿದ್ದು, ಪ್ರೊ. ಸಿ. ಎನ್. ವಾಘಮಾರೆ ಅವರು ಸಲ್ಲಿಸಿರುವ ವಿವರಣೆಯನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅನ್ವಯ ನಡೆಸಲಾಗುವ ಇಲಾಖಾ ವಿಚಾರಣೆಯಲ್ಲಿ ಪರಿಗಣಿಸಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಕಾರಣ, ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಪ್ರೊ. ಸಿ. ಎನ್. ವಾಘಮಾರೆ ಇವರು ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮ-2021 ರ ನಿಯಮ-03 ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನಲೆಯಲ್ಲಿ, ಅವರ ವಿರುದ್ದ ಮಾಡಲಾಗಿರುವ ಆಪಾದನೆಗಳಿಗೆ ಸಂಬಂಧಿಸಿದಂತೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿತ್ತು. ಸದರಿ ನೋಟಿಸ್‌ಗೆ ಅವರು ಸಲ್ಲಿಸಿರುವ ಉತ್ತರ/ವಿವರಣೆಯಲ್ಲಿ ತಮ್ಮ ವಿರುದ್ಧದ ಆಪಾದನೆಗಳನ್ನು ನಿರಾಕರಿಸಿದ್ದಾರೆ. ಕಾರಣ ಸದರಿ ಪ್ರಕರಣದಲ್ಲಿ ಪ್ರಾಥಮಿಕ ವಿಚಾರಣಾ ವರದಿಯ ಪ್ರಕಾರ ಆಪಾದನೆಗಳು ರುಜುವಾತಾಗಿರುವುದರಿಂದ ನಿಯಮಾನುಸಾರ ಪರಿಶೀಲಿಸಿ ಶಿಸ್ತು ಕ್ರಮದ ಕುರಿತು ಪರಿಶೀಲಿಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ಅನ್ವಯ ಇಲಾಖಾ ವಿಚಾರಣೆ ನಡೆಸುವುದು ಅಗತ್ಯವೆಂದು ಕಂಡುಬಂದ ಹಿನ್ನೆಲೆಯಲ್ಲಿ ಸದರಿ ವಿಷಯ ಕುರಿತು ಸುಧೀರ್ಘವಾಗಿ ಚರ್ಚಿಸಿದ ಸಭೆಯು, ಮಾನ್ಯ ಕುಲಪತಿಗಳು, ಡಾ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು ಇವರು ಕುಲಸಚಿವರ ಕಛೇರಿಗೆ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯ ಸೂಚಿಯನ್ನು ಉಲ್ಲೇಖಿಸಿ ಪತ್ರ ನೀಡಿರುವುದರಿಂದ, ಸದರಿಯವರಿಗೆ ವಿಷಯ ಸೂಚಿಯ ಬಗ್ಗೆ ಹೇಗೆ ತಿಳಿದು ಬಂತು ಎಂದು ವಿಚಾರಣೆ ನಡೆಸುವುದು ಹಾಗೂ ಉಭಯತ್ರರನ್ನು ಆಹ್ವಾನಿಸಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಸ್ಯೆಯನ್ನು ಪರಿಹರಿಸಲು, ಈ ಕುರಿತು ಪ್ರಾಧ್ಯಾಪಕರಿಗೆ ಸೂಕ್ತ ಕಠಿಣ ಎಚ್ಚರಿಕೆ ನೀಡಿ ಇದೇ ಹಂತದಲ್ಲಿ ಪ್ರಕರಣ ಕೈಬಿಡಲು ನಿರ್ಧರಿಸಲಾಯಿತು. |

| | | |
|---|---|---|
| 17 | 2026/07/17 | 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕ ಬಿ.ಇಡಿ/ಬಿ.ಪಿ.ಇಡಿ ಕೋರ್ಸುಗಳ ಪ್ರವೇಶಾತಿ ಶುಲ್ಕಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ನೀಡುವ ಕುರಿತು |
| | **ತೀರ್ಮಾನ** | 2023-24 ನೇ ಸಾಲಿನಲ್ಲಿ ಸರಕಾರದ ಏಕರೂಪದ ಶುಲ್ಕವನ್ನು ಅಳವಡಿಸಿಕೊಳ್ಳಲಾಗಿದ್ದು, ಸದರಿ ಶುಲ್ಕಗಳನ್ನು ಪ್ರತಿ ವರ್ಷ 10% ಅಥವಾ ಎರಡು ವರ್ಷಗಳಿಗೆ 20% ರಿಂದ 25% ರಷ್ಟು ಹೆಚ್ಚಿಗೆ ಮಾಡಿ ಜಾರಿಗೆ ತರಬಹುದೆಂದು ಸೂಚಿಸಿದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಇರುವ ಎಲ್ಲ ಸಂಯೋಜಿತ ಶಿಕ್ಷಣ/ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಬಿ.ಇಡಿ/ಬಿ.ಪಿ.ಇಡಿ ಕೋರ್ಸಗಳಿಗೆ 2025-26ನೇ ಶೈಕ್ಷಣಿಕ ಸಾಲಿನ ಶುಲ್ಕಕ್ಕೆ 10% ರಷ್ಟು ಹೆಚ್ಚಿಸಿ, 2026-27ನೇ ಸಾಲಿನಿಂದ ಅಳವಡಿಸಿಕೊಂಡಿದ್ದಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 18 | 2026/07/18 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಂ. ಬಿ. ಎ ಮತ್ತು ಎಂ. ಸಿ. ಎ ವಿಭಾಗಗಳಿಗೆ Industrial visit/Professional Skill Development Activities ಗಳಿಗೆ ಶೇ 20% ರಷ್ಟು ಮೊತ್ತವನ್ನು ಆಯ-ವ್ಯಯದಲ್ಲಿ ಮೀಸಲಿಡುವ ಕುರಿತು. |
| | **ತೀರ್ಮಾನ** | 2026-27 ನೇ ಶೈಕ್ಷಣಿಕ ಸಾಲಿನಿಂದ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ ಹಾಗೂ ವಿಜಯಪುರ ಸ್ನಾತಕೋತ್ತರ ಕೇಂದ್ರಗಳಲ್ಲಿರುವ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸಗಳು ವೃತ್ತಿಪರ ಕೋರ್ಸಗಳಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಉದ್ಯೋಗಾರ್ಹತೆ, ಕೌಶಲ್ಯಾಭಿವೃದ್ಧಿ ಮತ್ತು ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಒಟ್ಟು ಆಕರಿಸಲಾಗುವ ಪ್ರವೇಶ ಶುಲ್ಕದಲ್ಲಿ ಎಂ.ಬಿ.ಎ ವಿಭಾಗಕ್ಕೆ 20% ರಷ್ಟು ಮೊತ್ತವನ್ನು "Industrial visit" ಗಾಗಿ ಹಾಗೂ ಎಂ. ಸಿ. ಎ ವಿಭಾಗಕ್ಕೆ ಶೇ. 20% ರಷ್ಟು ಮೊತ್ತವನ್ನು "Industrial visit/Professional Skill Development Activities" ಗಾಗಿ ಲೆಕ್ಕ ಶೀರ್ಷಿಕೆಗಳನ್ನು ಅಳವಡಿಸಿಕೊಂಡು ಮೊತ್ತವನ್ನು ಮೀಸಲಿಡಲು ಸಭೆಯು ಅನುಮೋದನೆ ನೀಡಿತು. |
| 19 | 2026/07/19 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ SWAYAM/MOOCS ವಿಷಯಗಳನ್ನು ಅಳವಡಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಪಿಹೆಚ್.ಡಿ. ಪಠ್ಯಕ್ರಮದ ಜೊತೆಗೆ SWAYAM/MOOCS ಕೋರ್ಸ್‌ಗಳನ್ನು ಅಳವಡಿಸಿಕೊಳ್ಳಲು, MOOCS ಸಮಿತಿಯವರು ನೀಡಿರುವ ಶಿಫಾರಸ್ಸುಗಳನ್ನು ಅಂಗೀಕರಿಸಲು ಹಾಗೂ SWAYAM/MOOCS ನಿಯಮಾವಳಿಗಳಿಗೆ ಸಭೆಯು ಅನುಮೋದನೆ ನೀಡಿತು. |
| 20 | 2026/07/20 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25 ನೇ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ಸ್ನಾತಕ ನೂತನ ಪಠ್ಯಕ್ರಮದಲ್ಲಿ (SEP) Employability Skills ವಿಷಯವನ್ನು ಅಳವಡಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾದ ಸ್ನಾತಕ ನೂತನ ಪಠ್ಯಕ್ರಮದಲ್ಲಿ (SEP) ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ದೃಷ್ಟಿಯಿಂದ ಎಲ್ಲಾ ಕೋರ್ಸಗಳ ಎಲ್ಲಾ ಸೆಮೆಸ್ಟರ್‌ಗಳಿಗೆ ಹೊಸದಾಗಿ ಆರಂಭಿಸಿರುವ ಇ-ಸ್ಪರ್ಧಾ ಮೂಲಕ Employability Skills ವಿಷಯವನ್ನು ಒಟ್ಟು ಕ್ರೆಡಿಟ್‌ಗಳನ್ನು ಹೊರತುಪಡಿಸಿ ಕಡ್ಡಾಯ ವಿಷಯವನ್ನಾಗಿ ಅಳವಡಿಸಲು ಸಭೆಯು ಅನುಮೋದನೆ ನೀಡಿತು. |

ಸ್ನಾತಕ ಕೋರ್ಸಗಳಲ್ಲಿ Employability Skills ಎಂದು ಅಂಕಪಟ್ಟಿಗಳಲ್ಲಿ ನಮೂದಿಸುವುದು. UG ಮತ್ತು PG ಯ ಎಲ್ಲಾ ವಿದ್ಯಾರ್ಥಿಗಳಿಗೆ (B.Sc, B.Com-Chartered Accountant Exam, Company Secretory, Arts-ಬೇರೆ ಬೇರೆ ಹುದ್ದೆಗಳಿಗೆ, UPSC, (SSC) Staff Selection Commission, Railway, ITBP, Banking) ಎಲ್ಲಾ ಹುದ್ದೆಗಳಿಗೆ ಅನುಕೂಲ ಆಗುವಂತೆ ಇ-ಸ್ಪರ್ಧಾ ಮೂಲಕ Training ಕೊಡುವುದು ಹಾಗೂ GPSTR Teachers ನ್ನು ಇದರಲ್ಲಿ ತೆಗೆದುಕೊಳ್ಳಲಾಗಿದೆ ಹಾಗೂ Teacher Education Exam ನಲ್ಲಿ ಪಾಸ್ ಆಗಲು ಬೇಕಾಗುವಂತಹ ಕೋಚಿಂಗ್ ಕೂಡ ಇದರಲ್ಲಿ ಸಂಯೋಜನೆ ಮಾಡಲಾಗಿದೆ ಎಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು.

ಸದರಿ credit ಕುಲಸಚಿವರಿಗೆ ಸಲ್ಲಬೇಕು ಎಂದು ಮಾನ್ಯ ಕುಲಪತಿಗಳು ಮತ್ತು ಸಿಂಡಿಕೇಟ್ ಸದಸ್ಯರು ಅಭಿನಂದಿಸಿದರು ಮತ್ತು ಸದರಿ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.

| | | |
|---|---|---|
| 21 | 2026/07/21 | 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಕುರಿತು. |

**ತೀರ್ಮಾನ**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಕೆಳಕಾಣಿಸಿದಂತೆ ಸಭೆಯು ಅನುಮೋದನೆ ನೀಡಿತು.

1. 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಅರ್ಜಿಗಳನ್ನು 2026 ರ ಜುಲೈ ತಿಂಗಳಲ್ಲಿ ಹಾಗೂ ಪ್ರವೇಶ ಪ್ರಕ್ರಿಯೆಯನ್ನು ಆಗಸ್ಟ್ ತಿಂಗಳಲ್ಲಿ ಜರುಗಿಸಲು ಸಭೆಯು ಅನುಮೋದನೆ ನೀಡಿತು.
2. 2026-27 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದಂತೆ ಸ್ನಾತಕೋತ್ತರ ಕೋರ್ಸ್‌ಗಳನ್ನು ಜರುಗಿಸಲು ಸಭೆಯು ಅನುಮೋದನೆ ನೀಡಿತು.

| ಸಂ | ಕೋರ್ಸುಗಳು | ಕೋರ್ಸ್ ಜರುಗುವ ಸ್ಥಳಗಳು |
|---|---|---|
| 01 | ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಮುಖ್ಯ ಆವರಣ, ವಿದ್ಯಾಸಂಗಮ ಭೂತರಾಮನಹಟ್ಟಿ |
| 02 | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಗಣಕವಿಜ್ಞಾನ, ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ವಿಜ್ಞಾನ ಸಂಗಮ, ನೂತನ ಆವರಣ, ಹಿರೇಬಾಗೇವಾಡಿ |
| 03 | ಕನ್ನಡ ಮತ್ತು ಇಂಗ್ಲೀಷ | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ |

| | | |
|---|---|---|
| 04 | ಮರಾಠಿ | ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ/ ಮುಖ್ಯ ಆವರಣ, ವಿದ್ಯಾಸಂಗಮ, ಭೂತರಾಮನಹಟ್ಟಿ |
| 05 | ಕನ್ನಡ, ಇಂಗ್ಲೀಷ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ ಗಣಿತಶಾಸ್ತ್ರ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಉರ್ದು ಮತ್ತು ಎಂ.ಸಿ.ಎ | ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ. |

3. ಸ್ನಾತಕೋತ್ತರ ಕೇಂದ್ರ ವಚನ ಸಂಗಮ ತೊರವಿ, ವಿಜಯಪುರದಲ್ಲಿ ಪ್ರಸ್ತುತ 2026-27 ನೇ ಸಾಲಿನಿಂದ ಗಣಿತಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮರಾಠಿ, ಉರ್ದು ಮತ್ತು ಎಮ್.ಸಿ.ಎ ಕೋರ್ಸಗಳನ್ನು ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.

4. ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿರುವ ವಾಣಿಜ್ಯಶಾಸ್ತ್ರ ಕೋರ್ಸನ್ನು ವಿಶ್ವವಿದ್ಯಾಲಯ ಮುಖ್ಯ ಅವರಣ, ಭೂತರಾಮನಹಟ್ಟಿಗೆ ಪ್ರವೇಶ ಮಿತಿಗಳೊಂದಿಗೆ ವರ್ಗಾಯಿಸಲು ಸಭೆಯು ಅನುಮೋದನೆ ನೀಡಿತು.

5. MBA and MCA ಕೋರ್ಸಗಳ ವಿಭಾಗದ ಮುಖ್ಯಸ್ಥರು ಕೋರಿರುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ KEA ನಡೆಸಿದ PGCET 2025 ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡುವ ಮೂಲಕ ಪ್ರವೇಶಾತಿ ನೀಡಲು ಅಥವಾ PGCET 2026 ಪರೀಕ್ಷೆ ಬರೆದ ವಿದ್ಯಾರ್ಥಿಗಳು ನೇರವಾಗಿ ವಿಶ್ವವಿದ್ಯಾಲಯದ MBA ಮತ್ತು MCA ವಿಭಾಗಗಳಲ್ಲಿ ಪ್ರವೇಶಾತಿಯನ್ನು ನೀಡಲು ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (KEAI ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ವೇಳಾಪಟ್ಟಿಯಂತೆ ಅರ್ಜಿ ಸಲ್ಲಿಸಲು ಹಾಗೂ ಸದರಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ನಡೆಸುವ KRCU-U-CET-2026 ಪರೀಕ್ಷೆ ಮುಖಾಂತರ ಪ್ರವೇಶಾತಿಯನ್ನು ನೀಡಲು ಸಭೆಯು ಅನುಸಮರ್ಥನೆ ನೀಡಿತು.

6. ಎಮ್‌ಇಡಿ (MEd) ಕೋರ್ಸಕ್ಕೆ ಬಿ.ಇಡಿ (B.Edi ಅಂತಿಮ ಸೆಮಿಸ್ಟರನ ಫಲಿತಾಂಶ ಬಂದ ನಂತರ ಜರುಗಿಸಲು ಸಭೆಯು ಅನುಸಮರ್ಥನೆ ನೀಡಿತು.

7. ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿಯ ಕೋರ್ಸುಗಳ ಅಧ್ಯಯನಕ್ಕೆ ಆಸಕ್ತವಿರುವ ವಿದ್ಯಾರ್ಥಿಗಳಿಗೆ ಸದರಿ ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿಯೇ ಪ್ರವೇಶ ಪ್ರಕ್ರಿಯೆಯನ್ನು ಕೈಗೊಳ್ಳಲು ಸಭೆಯು ಅನುಸಮರ್ಥನೆ ನೀಡಿತು.

8. ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ, ಸಂಯೋಜಿತ ಮಹಾವಿದ್ಯಾಲಯಗಳು, ಸ್ವಾಯತ್ತ ಮಹಾವಿದ್ಯಾಲಯಗಳಿಗೆ 2025-26 ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಗೆ ಅಳವಡಿಸಿಕೊಂಡಿರುವ ಪ್ರವೇಶ ಶುಲ್ಕಗಳಿಗೆ ಶೇ.5% ರಷ್ಟು ಹೆಚ್ಚಿಸಲು ಹಾಗೂ ಪ್ರಸ್ತುತ ಸಾಲಿನಲ್ಲಿ (2026-27) ಪ್ರಥಮ ವರ್ಷದ ಪ್ರವೇಶ ಶುಲ್ಕದಲ್ಲಿ ಹೊಸದಾಗಿ E-Spardha-200/- & Swayam Moocs-250/ಅಳವಡಿಸಿಕೊಳ್ಳಲು ಸಭೆಯು ಅನುಸಮರ್ಥನೆ ನೀಡಿತು.

9. 2025-26ನೇ ಸಾಲಿನ ಪ್ರಥಮ ವರ್ಷದ ಪ್ರವೇಶ ಶುಲ್ಕಗಳನ್ನು ಯಥಾವತ್ತಾಗಿ 2026 27ನೇ

<table>
<tr><td></td><td></td><td>ಸಾಲಿನಲ್ಲಿ ಬರುವ 2025-26 ದ್ವಿತೀಯ ವರ್ಷಕ್ಕೆ ಅಳವಡಿಸಲು ಹಾಗೂ ಪ್ರಸ್ತುತ ಸಾಲಿನಲ್ಲಿ (2026-27 ದ್ವಿತೀಯ ವರ್ಷದ ಪ್ರವೇಶ ಶುಲ್ಕದಲ್ಲಿ ಹೊಸದಾಗಿ E Spardha ರೂ.200/- ಶೀರ್ಷಿಕೆ ಅಡಿಯಲ್ಲಿ ಶುಲ್ಕಗಳನ್ನು ಅಳವಡಿಸಲು ಸಭೆಯು ಅನುಸಮರ್ಥನೆ ನೀಡಿತು.<br><br>10. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2026, ಬೆಂಗಳೂರು, ದಿನಾಂಕ 13-05-2026 ರಂತೆ 400 ರೋಸ್ಟರ್ ಬಿಂದುಗಳಂತೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಯ ಸೀಟು ಹಂಚಿಕೆ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಸಭೆಯು ಅನುಸಮರ್ಥನೆ ನೀಡಿತು.<br><br>ಹಾಗೂ<br><br>1) 2026-27 ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶಾತಿಯಲ್ಲಿ ಹಿರಿಯ ನಾಗರಿಕರಿಗೆ (Senior Citizen) ಅವಕಾಶ ನೀಡುವುದು.<br>2) 2026-27 ನೇ ಶೈಕ್ಷಣಿಕ ಸಾಲಿನಲ್ಲಿ ವಿಜಯಪುರದಲ್ಲಿರುವ ಮಹಾವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಪರೀಕ್ಷೆಗಳನ್ನು ಸ್ನಾತಕೋತ್ತರ ಕೇಂದ್ರದಲ್ಲಿಯೇ ನಡೆಸುವುದು.<br>3) ವಿಜಯಪುರದಲ್ಲಿಯ ಪ್ರತಿಯೊಂದು ಮಹಾವಿದ್ಯಾಲಯಗಳಿಂದ ಮೂರು ವಿದ್ಯಾರ್ಥಿಗಳನ್ನು ಸ್ನಾತಕೋತ್ತರ ಕೇಂದ್ರಕ್ಕೆ ಕಳುಹಿಸುವ ಕುರಿತು ಜವಾಬ್ಧಾರಿಗಳನ್ನು ಮಹಾವಿದ್ಯಾಲಯದ ಪ್ರಾಚಾರ್ಯರಿಗೆ ವಹಿಸುವುದು.<br>4) ಸ್ನಾತಕೋತ್ತರ ಪ್ರವೇಶಾತಿ ಪ್ರಕ್ರಿಯೆಗಳಲ್ಲಿ Principal Sub Committee ರಚಿಸುವುದು.</td></tr>
<tr><td>22</td><td>2026/07/22</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ DSC ಮಾನವಶಾಸ್ತ್ರ ವಿಷಯವನ್ನು ಪ್ರಾರಂಭಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಮಾನವಶಾಸ್ತ್ರವನ್ನು BA ನಲ್ಲಿ ಮಾತ್ರ DSC ಯಾಗಿ ಪ್ರಾರಂಭಿಸಲು ವಿಶ್ವವಿದ್ಯಾಲಯ ಸ್ವಂತ ನಿಧಿಯಲ್ಲಿ ಯಾವುದೇ ಹುದ್ದೆಗಳ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸದೇ ಇರುವ ಷರತ್ತಿಗೆ ಒಳಪಡಿಸಿ, ಸರ್ಕಾರದ ಒಪ್ಪಿಗೆ/ಅನುಮೋದನೆ ನಿರೀಕ್ಷಿಸಿ ಆರಂಭಿಸಲು ಸಭೆಯು ಅನುಮೋದನೆ ನೀಡಿತು.</td></tr>
<tr><td>23</td><td>2026/07/23</td><td>2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಡಾ. ಫ. ಗು. ಹಳಕಟ್ಟಿ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ 2026-27 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಾಣಿಸಿದಂತೆ ಹೊಸ ಸ್ನಾತಕೋತ್ತರ ಕೋರ್ಸುಗಳನ್ನು 48 ಪ್ರವೇಶಾತಿ ಮಿತಿಯೊಂದಿಗೆ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.<br><br>
<table>
<tr><th>ಹೊಸ ಕೋರ್ಸ ವಿವರ</th><th>ಪ್ರವೇಶಾತಿ ಮಿತಿ</th></tr>
<tr><td>ಎಂ.ಎಸ್ಸಿ ಗಣಿತಶಾಸ್ತ್ರ</td><td>40+8</td></tr>
<tr><td>ಎಂ.ಎ. ರಾಜ್ಯಶಾಸ್ತ್ರ</td><td>40+8</td></tr>
<tr><td>ಎಂ.ಎ. ಅರ್ಥಶಾಸ್ತ್ರ</td><td>40+8</td></tr>
<tr><td>ಎಂ.ಎ. ಉರ್ದು</td><td>40+8</td></tr>
<tr><td>ಎಂ.ಎ. ಮರಾಠಿ</td><td>40+8</td></tr>
</table></td></tr>
</table>

<table>
<tr><td>24</td><td>2026/07/24</td><td>2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೇಂದ್ರ ವಿಜಯಪುರ ಮತ್ತು ಮುಖ್ಯ ಆವರಣದಲ್ಲಿರುವ ಎಂ. ಬಿ. ಎ ಮತ್ತು ಎಂ. ಸಿ. ಎ ಹಾಗೂ ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿರುವ ಎಂ. ಸಿ. ಎ ಕೋರ್ಸುಗಳಿಗೆ 20% ಪ್ರವೇಶಾತಿ ಮಿತಿಯನ್ನು ಹೆಚ್ಚಿಸಿ ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿ ಮಂಡಿಸಲಾಗಿದೆ.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಎಂ.ಬಿ.ಎ. ಮತ್ತು ಎಂ.ಸಿ.ಎ. ಹಾಗೂ ಡಾ.ಫ.ಗು.ಹಳಕಟ್ಟಿ ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿರುವ ಎಂ.ಸಿ.ಎ. ಕೋರ್ಸಗಳಿಗೆ 20% ಪ್ರವೇಶಾತಿ ಮಿತಿಯನ್ನು ಹೆಚ್ಚಿಸಲು ಈ ಕೆಳಗಿನಂತೆ ಸಭೆಯು ಅನುಮೋದನೆ ನೀಡಿತು.
<table>
<tr><th>ಹೊಸ ಕೋರ್ಸ ವಿವರ</th><th>ಪ್ರಸ್ತುತ ಪ್ರವೇಶ ಮಿತಿ</th><th>ಹೆಚ್ಚಿಸಿದ ಪ್ರವೇಶ ಮಿತಿ</th><th>ಒಟ್ಟು ಪ್ರವೇಶ ಮಿತಿ</th></tr>
<tr><td>ಎಂ.ಬಿ.ಎ (ಮುಖ್ಯ ಆವರಣ)</td><td>60</td><td>12</td><td>72</td></tr>
<tr><td>ಎಂ.ಸಿ.ಎ (ಮುಖ್ಯ ಆವರಣ)</td><td>40</td><td>8</td><td>48</td></tr>
<tr><td>ಎಂ.ಸಿ.ಎ (ಸ್ನಾತಕೋತ್ತರ ಕೇಂದ್ರ ವಿಜಯಪುರ)</td><td>40</td><td>8</td><td>48</td></tr>
</table></td></tr>
<tr><td>25</td><td>2026/07/25</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಆಕಸ್ಮಿಕ ಅಪಘಾತಕ್ಕೆ ಒಳಗಾದರೆ ಅಥವಾ ಅಕಾಲಿಕವಾಗಿ ಮರಣ ಹೊಂದಿದರೆ ಅವರಿಗೆ ಹಣಕಾಸಿನ ನೆರವು ನೀಡುವ ಕುರಿತು.</td></tr>
<tr><td></td><td>ತೀರ್ಮಾನ</td><td>ಇಲ್ಲಿಯವರೆಗೆ ಒಂದು ವಿಮಾ ಕಂಪನಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು, ಪ್ರತಿ ವರ್ಷ ಕೊಟ್ಯಾಂತರ ರೂಪಾಯಿಗಳನ್ನು ವಿದ್ಯಾರ್ಥಿಗಳ ವಿಮೆ ಸಲುವಾಗಿ ಭರಣಾ ಮಾಡಲಾಗುತ್ತಿತ್ತು. ಸದರಿ ಮೊತ್ತದಲ್ಲಿ ಕೆಲವು ಲಕ್ಷಗಳಷ್ಟು ದುಡ್ಡನ್ನು ಮಾತ್ರ ವಿದ್ಯಾರ್ಥಿಗಳಿಗೆ ವಿಮೆ ರೂಪದಲ್ಲಿ ವಿಮಾ ಕಂಪನಿ ನೀಡುತ್ತಿತ್ತು. ಕಳೆದ ಕೆಲವು ವರ್ಷಗಳಿಂದ ವಿಮಾ ಕಂಪನಿಗೆ ವಿಮೆ ಮೊತ್ತವನ್ನು ಭರಿಸಿರುವುದಿಲ್ಲ. ಸದರಿ ಉಳಿಕೆ ಕೊಟ್ಯಾಂತರ ಮೊತ್ತವನ್ನು ಠೇವಣಿಕರಿಸಿ ಅದರಿಂದ ಬರುವ ಬಡ್ಡಿಯ ಮೊತ್ತದಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆರ್ಥಿಕ ಲಾಭವನ್ನು ಒದಗಿಸಬಹುದಾಗಿರುತ್ತದೆ ಎಂದು ಸದಸ್ಯ ಕಾರ್ಯದರ್ಶಿಯವರು ಸಭೆಗೆ ಮಾಹಿತಿ ನೀಡಿದರು.<br><br>ಮುಂದುವರೆದು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಶೈಕ್ಷಣಿಕ ಸಾಲಿನಿಂದ ವ್ಯಾಸಾಂಗ ಮಾಡುತ್ತಿರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಅನಿರಿಕ್ಷಿತ ಅಪಘಾತ, ದುರ್ಘಟನೆ, ದುರ್ಮರಣ ಸಂಭವಿಸಿದರೆ ಅಥವಾ ತೀವ್ರ ಕಾಯಿಲೆಗೆ ಒಳಗಾದರೆ ಅವರಿಗೆ 2026-27 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾಲಯದ "Ordinance Governing Student Health and Safety Insurance Policy of Rani Channamma University Belagavi" ರ ಪ್ರಕಾರ ಇಲ್ಲಿಯವರೆಗೆ ಸಂಗ್ರಹಿಸಿರುವ ಮತ್ತು ಮುಂದೆ ಸಂಗ್ರಹಿಸಲಿರುವ Student Insurance ಶುಲ್ಕ ಮೊತ್ತವನ್ನು ವಿಶ್ವವಿದ್ಯಾಲಯದಲ್ಲಿ "ವಿದ್ಯಾರ್ಥಿ ವಿಮಾ ನಿಧಿ" ಎಂದು ಠೇವಣಿಕರಿಸಿ ಅದರಿಂದ ಬರುವ ಬಡ್ಡಿಯ ಮೊತ್ತದಿಂದ ಹಣಕಾಸಿನ ನೆರವು ನೀಡಲು ಹಾಗೂ ಸಂಬಂಧಿಸಿದ ಅಧ್ಯಾದೇಶ(Ordinance) ಹೊರಡಿಸಲು ಸಭೆಯು ಅನುಮೋದನೆ ನೀಡಿತು.</td></tr>
</table>

<table>
<tr><td>26</td><td>2026/07/26</td><td>ಪಿಎಚ್. ಡಿ. ಶುಲ್ಕಗಳನ್ನು ಶೇ 10% ಹೆಚ್ಚಿಸಿ ತಯಾರಿಸಿದ Ph. D. Fee Structure ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ.</td></tr>
<tr><td></td><td>ತೀರ್ಮಾನ</td><td>2024-25 ನೇ ಸಾಲಿಗೆ ಪಿಎಚ್. ಡಿ. ಶುಲ್ಕಗಳನ್ನು ಶೇ 10% ಹೆಚ್ಚಿಸಿ ತಯಾರಿಸಿದ Ph. D. Fee Structure ಗೆ ಸಭೆಯು ಅನುಮೋದನೆ ನೀಡಿತು.</td></tr>
<tr><td>27</td><td>2026/07/27</td><td>ಪಿಎಚ್. ಡಿ. ನಿಯಮಾವಳಿ 21.2 ರಲ್ಲಿ ತಿದ್ದುಪಡಿ ಮಾಡಿ ಪರಿಷ್ಕರಿಸಿದ ನಿಯಮಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ಸಂಶೋಧನಾರ್ಥಿಗಳ ಪ್ರಗತಿ ವರದಿಗಳ ಕುರಿತು ಪಿಎಚ್.ಡಿ. ನಿಯಮಾವಳಿ 21.2 ರಲ್ಲಿ ತಿದ್ದುಪಡಿ ಮಾಡಿ ಪರಿಷ್ಕರಿಸಿದ ನಿಯಮಾವಳಿಯನ್ನು ಈ ಕೆಳಕಾಣಿಸಿದಂತೆ ಸಭೆಯು ಅನುಮೋದನೆ ನೀಡಿತು.
<table>
<tr><th>Existing 21.2 Rule</th><th>Revised 21.2 Rule</th></tr>
<tr><td>Besides, the candidate shall make, once in a year (preferably during the meeting of Doctoral Committee), presentation about the progress made by him/her during the last one year and also the work plan for the next one year.</td><td>Besides, the candidate shall make, once in a year (preferably during the meeting of Doctoral Committee), presentation about the progress made by him/her during the last one year and also the work plan for the next one year. Full-time scholar must submit at least five progress reports, while part-time scholars must submit seven progress reports</td></tr>
</table>
1) Full Time ಸಂಶೋಧನಾರ್ಥಿಗಳು ಒಟ್ಟು 5 Progress ವರದಿ ಕೊಡುವುದು. ಹಾಗೂ Part Time ಸಂಶೋಧನಾರ್ಥಿಗಳು 7 Progress ವರದಿ ಸಲ್ಲಿಸುವುದು.<br>
2) ಕೋರ್ಸ್ ವರ್ಕ್ ಆದ ತಕ್ಷಣ ಸಂಶೋಧನಾರ್ಥಿಗಳಿಂದ ಒಂದು Progress ವರದಿ ತೆಗೆದುಕೊಳ್ಳುವುದು. ಆಗ 3 ವರ್ಷಕ್ಕೆ 5 ವರದಿಗಳು ಸರಿ ಆಗುವುದು.<br>
3) Provisional Registration Certificate Course 6 ತಿಂಗಳು ಮುಗಿದ ಮೇಲೆ ಒಂದು Certificate ಕೋಡುತ್ತಾರೆ ಅಲ್ಲಿಂದ 6 ತಿಂಗಳಿಗೆ ವರದಿ ಕೊಡುವುದು.<br>
4) Full Time ಸಂಶೋಧನಾರ್ಥಿಗಳು ಎರಡುವರೆ ವರ್ಷಕ್ಕೆ Eligibility ಬಂದ ನಂತರ 5 ವರದಿ ಆಗುವುದು.<br>
5) Part Time Scolar ಅವರದು 4 ವರ್ಷಕ್ಕೆ ಮುಗಿಯುತ್ತದೆ. ಅವರು 3 ವರ್ಷಕ್ಕೆ Submit ಮಾಡಬಹುದು.<br>
6) Committee ವರದಿಯಲ್ಲಿ Ph.d Thesis ನಲ್ಲಿ AI ಎಷ್ಟು Percent ಇರಬೇಕು ಹಾಗೂ Logarithem ಹೇಗಿರಬೇಕು ಎಂಬುದರ ಬಗ್ಗೆ ಸಲ್ಲಿಸಿರುವ Committee Report ನ್ನು ಬೇರೆ ವಿಶ್ವವಿದ್ಯಾಲಯದಲ್ಲಿ 25% ಒಪ್ಪಿಕೊಂಡಿರುತ್ತಾರೆ. ಇನ್ನೂ ಕೆಲವು ವಿಶ್ವವಿದ್ಯಾಲಯದವರು 10% ಒಪ್ಪಿಕೊಂಡಿರುತ್ತಾರೆ. ನಾವು 15% ಒಪ್ಪಿಕೊಳ್ಳಬಹುದು ಎಂದು ಸಭೆ ತೀರ್ಮಾನಿಸಿತು.</td></tr>
<tr><td>28</td><td>2026/07/28</td><td>ಪಿಎಚ್. ಡಿ. ನಿಯಮಾವಳಿ 8.4.4 ಮತ್ತು 8.4.5 ರಲ್ಲಿ ತಿದ್ದುಪಡಿ ಮಾಡಿ ಪರಿಷ್ಕರಿಸಿದ ನಿಯಮಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ಪ್ರವೇಶ ಪರೀಕ್ಷೆ (Entrance Exam) ನಡೆಸಲು ಸಿದ್ಧಪಡಿಸುವ ಪ್ರಶ್ನೆ-ಪತ್ರಿಕೆಗಳ ಮಾದರಿ ಹಾಗೂ ಪ್ರವೇಶ ಪರೀಕ್ಷೆಯ ಅವಧಿ ಕುರಿತು ಪಿಎಚ್.ಡಿ. ನಿಯಮಾವಳಿ 8.4.4 ಮತ್ತು 8.4.5 ರಲ್ಲಿ ತಿದ್ದುಪಡಿ ಮಾಡಿ ಪರಿಷ್ಕರಿಸಿದ ನಿಯಮಾವಳಿಯನ್ನು ಸಭೆಯು ಈ ಕೆಳಕಾಣಿಸಿದ ಷರತ್ತುಗಳಂತೆ ಅನುಮೋದನೆ ನೀಡಿತು.</td></tr>
</table>

| | | |
|---|---|---|
| | | 1) ಗಣನೀಯವಾಗಿ ಸಂದರ್ಶನದ ಅಂಕಗಳ ಬದಲಾವಣೆಯನ್ನು ಈ ಕೆಳಗಿನಂತೆ ಮಾಡುವುದು.<br>NET ಮತ್ತು SLET ಪಾಸ್ ಮಾಡಿದವರಿಗೆ 50 ರ ಬದಲಾಗಿ 10 ಮತ್ತು<br>Entrance ನಿಂದ ಬಂದವರಿಗೆ 25 ರ ಬದಲಾಗಿ 5 ಮಾಡುವುದು.<br><br>2) KPSC ಯಲ್ಲಿ ಒಟ್ಟು 25 ಅಂಕಗಳ ಪೈಕಿ Less than 10 ಇದ್ದರೆ It should be recorded with reasons ಮತ್ತು more than 20 ಅಂಕ ನೀಡಿದರೆ It should be recorded with reasons ಎಂಬ ವಿಧಾನವಿದೆ.<br><br>ಅದರಂತೆ ನಮ್ಮ ವಿಶ್ವವಿದ್ಯಾಲಯದಲ್ಲಿ ಪಿ.ಎಚ್.ಡಿ ಸಂದರ್ಶನ ಅಂಕಗಳಲ್ಲಿ ಒಟ್ಟು 10 ಅಂಕ ಇದ್ದಲ್ಲಿ 7 ಕ್ಕಿಂತ ಹೆಚ್ಚು ಅಂಕ ನೀಡಿದ್ದಲ್ಲಿ ಕಾರಣ ದಾಖಲಿಸಬೇಕು ಮತ್ತು 3 ಕ್ಕಿಂತ ಕಡಿಮೆ ಅಂಕ ನೀಡಿದ್ದಲ್ಲಿ ಕಾರಣ ದಾಖಲಿಸಬೇಕು ಮತ್ತು 5 ಅಂಕ ಇರುವಲ್ಲಿ 5 ಅಥವಾ 4 ಅಂಕ ನೀಡಿದ್ದಲ್ಲಿ ಕಾರಣ ದಾಖಲಿಸಬೇಕು ಹಾಗೂ 3 ಕ್ಕಿಂತ ಕಡಿಮೆ ಅಂಕ ನೀಡಿದ್ದಲ್ಲಿ ಕಾರಣ ದಾಖಲಿಸಬೇಕು. ಹೀಗೆ ತಿದ್ದುಪಡಿ ಜಾರಿಗೆ ತರಲು ಸಭೆ ತೀರ್ಮಾನಿಸಿತು.<br><br>3) Selection of Roster & Interview UGC Rules ಹಾಗೂ ಬೇರೆ ರಾಜ್ಯದ ವಿಶ್ವವಿದ್ಯಾಲಯದಲ್ಲಿಯ ಮಾಹಿತಿ ಹಾಗೂ ನಮ್ಮ ವಿಶ್ವವಿದ್ಯಾಲಯದಲ್ಲಿಯ ಮಾಹಿತಿಯನ್ನು Review ಮಾಡಿ ಒಟ್ಟಾರೆಯಾಗಿ Interview ಮತ್ತು ರೋಷ್ಟರ Follow ಮಾಡುವುದರ ಬಗ್ಗೆ ಹಾಗೂ ಸಂದರ್ಶನಕ್ಕೆ ಅಂಕಗಳನ್ನು ನಿಗದಿಪಡಿಸುವ ಬಗ್ಗೆ ಹಾಗೂ ಎಷ್ಟು ಮಾರ್ಕ್ ಕೊಡಬೇಕೊ ಅಥವಾ ಕೊಡುವುದು ಬೇಡವೋ ಅಥವಾ ತೆಗೆದು ಬಿಡುವುದೋ ಅಂತ ಮರುಮೌಲ್ಯಮಾಪನ (Reassess) ಮಾಡಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವರದಿ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು. |
| 29 | 2026/07/29 | ಪಿಎಚ್. ಡಿ. ಸಂಶೋಧನಾರ್ಥಿಗಳಿಂದ ಮಹಾಪ್ರಬಂಧಗಳನ್ನು ಮೊದಲ ಹಂತದಲ್ಲಿ 04 ಸ್ಪೈರಲ್ ಬೈಂಡಿಂಗ್‌ನಲ್ಲಿ ತೆಗೆದುಕೊಳ್ಳುವ ಕುರಿತು. |
| | **ತೀರ್ಮಾನ** | ಪಿಎಚ್. ಡಿ. ಸಂಶೋಧನಾರ್ಥಿಗಳಿಂದ ಮಹಾಪ್ರಬಂಧಗಳನ್ನು ಮೊದಲ ಹಂತದಲ್ಲಿ ನಾಲ್ಕು (04) ಸ್ಪೈರಲ್ ಬೈಂಡಿಂಗ್‌ನಲ್ಲಿ ತೆಗೆದುಕೊಂಡು, ಮೌಲ್ಯಮಾಪಕರಿಗೆ ಮೌಲ್ಯಮಾಪನಕ್ಕೆ ಕಳುಹಿಸಲು ಹಾಗೂ ಮೌಲ್ಯಮಾಪಕರು ಮಹಾಪ್ರಬಂಧಗಳಲ್ಲಿ ನ್ಯೂನ್ಯತೆಗಳನ್ನು ತಿಳಿಸಿದಲ್ಲಿ/ಬದಲಾವಣೆಗಳನ್ನು ಸೂಚಿಸಿದಲ್ಲಿ ಅಂತಹ ಮಾಹಿತಿಯನ್ನು ಮಾರ್ಗದರ್ಶಕರ ಮೂಲಕ ಸಂಶೋಧನಾರ್ಥಿಗಳಿಗೆ ತಿಳಿಸಿ ಅಂತಿಮವಾಗಿ, ನ್ಯೂನ್ಯತೆಗಳನ್ನು ಸರಿಪಡಿಸಿದ/ಬದಲಾವಣೆಗಳನ್ನು ಒಳಗೊಂಡಂತಹ ಅಂತಿಮ ಎರಡು ಮಹಾಪ್ರಬಂಧಗಳನ್ನು ಸ್ಪೈರಲ್ ಬೈಂಡಿಂಗ್‌ನಲ್ಲಿ ಸಂಶೋಧನಾರ್ಥಿಗಳಿಂದ ಪಡೆದುಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| 30 | 2026/07/30 | ಪಿಎಚ್. ಡಿ. ನಿಯಮಾವಳಿ-2025ನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| | **ತೀರ್ಮಾನ** | ಪಿಎಚ್.ಡಿ. ನಿಯಮಾವಳಿ-2025 ನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬೆಂಗಳೂರು, ಇವರಿಗೆ ದಿನಾಂಕ: 01-08-2025 ರಂದು ಕಳುಹಿಸಿಲಾಗಿತ್ತು ಆದರೆ, ಸದರಿ ನಿಯಮಾವಳಿ-2025 ರಲ್ಲಿ 11 ಅಂಶಗಳನ್ನು ತಿದ್ದುಪಡಿ ಮಾಡಿ ಅಳವಡಿಸಿಕೊಂಡು ಸಲ್ಲಿಸವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ: ಇಡಿ/224/ಯುಅರ್‌ಸಿ/2023 ದಿನಾಂಕ: 11-03-2026 ರಂದು ಮರಳಿ ಕಳುಹಿಸಿದ್ದರಿಂದ, ಅವರು ಸೂಚಿಸಿದ 11 ಅಂಶಗಳನ್ನು ಪಿಎಚ್.ಡಿ. ನಿಯಮಾವಳಿ-2025 ರಲ್ಲಿ ತಿದ್ದುಪಡಿ ಮಾಡಿ ಅಳವಡಿಸಿಕೊಳ್ಳಲಾಗಿದೆ ಹಾಗೂ ನಿಯಮಾವಳಿ |

| | | |
|---|---|---|
| | | 8.4.4, 8.4.5 ಮತ್ತು 21.2 ರಲ್ಲಿ ಕೂಡ ತಿದ್ದುಪಡಿ ಮಾಡಿ ಅಳವಡಿಸಿಕೊಳ್ಳಲಾದ 11 ಅಂಶಗಳನ್ನು ಪರಿಷ್ಕರಿಸಿದ ಪಿಎಚ್.ಡಿ. ನಿಯಮಾವಳಿ-2025 ಕ್ಕೆ ಮತ್ತು ಈ ಹಿಂದಿನ Agenda 26,27,28,29 ರಲ್ಲಿನ ತೀರ್ಮಾನ ಅಳವಡಿಸಿ ಪರಿಷ್ಕೃತ ನಿಯಮಾವಳಿ ರಚಿಸಿ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು. |
| 31 | 2026/07/31 | RCU-FESMA ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ತರಬೇತುದಾರರು ಮತ್ತು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಗಾಗಿ 60 ಲ್ಯಾಪ್‌ಟಾಪ್‌ಗಳನ್ನು ಒದಗಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷಿ ಉಪಕ್ರಮವಾದ RCU-FOUNDATION FOR ENTREPRENEURSHIP SKILLING AND MANAGEMENT ACADEMIA (RCU-FESMA) ಅಡಿಯಲ್ಲಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ಪ್ರಾಯೋಗಿಕವಾಗಿ (Practical Sessions) ನಡೆಸಲು ಮತ್ತು ಡಿಜಿಟಲ್ ಸಾಕ್ಷರತೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ತರಬೇತುದಾರರ ಹಾಗೂ ಗ್ರಾಮೀಣ ಭಾಗದ SC/ST/OBC ವಿದ್ಯಾರ್ಥಿಗಳ ಬಳಕೆಗೆ ಒಟ್ಟು 60 ಲ್ಯಾಪ್‌ಟಾಪ್‌ಗಳ (Laptops) ತುರ್ತು ಅವಶ್ಯಕತೆ ಇರುತ್ತದೆ.<br><br>ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿಗಳ ವೃತ್ತಿಜೀವನ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಸುಗಮ ನಿರ್ವಹಣೆಗಾಗಿ ಹಾಗೂ ತರಬೇತುದಾರರ ಬೋಧನೆ ಮತ್ತು ವಿದ್ಯಾರ್ಥಿಗಳ ಪ್ರಾಯೋಗಿಕ ಮೌಲ್ಯಮಾಪನಕ್ಕಾಗಿ ಒಟ್ಟು 60 ಉತ್ತಮ Configuration ಹೊಂದಿರುವ ಲ್ಯಾಪ್‌ಟಾಪ್‌ಗಳನ್ನು ಮಂಜೂರು ಮಾಡಿ ಒದಗಿಸುವ ವಿಷಯ ಕುರಿತು ಚರ್ಚಿಸಿದ ಸಭೆಯು RCU-FESMA ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ತರಬೇತುದಾರರು ಮತ್ತು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಗಾಗಿ ಹಂತ ಹಂತವಾಗಿ 60 ಲ್ಯಾಪ್‌ಟಾಪ್‌ಗಳನ್ನು ಅಗತ್ಯಕ್ಕೆ ತಕ್ಕಂತೆ SCP/TCP ಯಲ್ಲಿ ಖರೀದಿಸಿ ಬಾಕಿ ಇರುವ ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಹಾಗೂ ಮರಳಿ ಯಥಾಸ್ಥಿತಿಯಲ್ಲಿ ಪಡೆಯುವ ಷರತ್ತಿಗೆ ಒಳಪಡಿಸಿ ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಸಭೆಯು ಅನುಮೋದನೆ ನೀಡಿತು. |
| 32 | 2026/07/32 | 2026-27ನೇ ಸಾಲಿನ ಮೇ-ಜೂನ ನಲ್ಲಿ ಜರುಗಿದ ಪರೀಕ್ಷೆಗಳ MPLEC ನಕಲು ಪ್ರಕರಣಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳ ವಿಚಾರಣಾ ಪ್ರಕ್ರಿಯೆ ಕೈಗೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27 ರ ಮೇ-ಜೂನ ನಲ್ಲಿ ಬೆಳಗಾವಿ, ವಿಜಯಪುರ ಜಿಲ್ಲೆಗಳಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಬಿ.ಎಡ್. ರೆಗ್ಯೂಲರ್ ಮತ್ತು ರಿಪೀಟರ್ ಪರೀಕ್ಷೆಗಳು ಜರುಗಿದ್ದು, ಸದರಿ ಪರೀಕ್ಷೆಗಳಲ್ಲಿ ನಕಲು ಆರೋಪ ಹೊಂದಿರುವ 369 ವಿದ್ಯಾರ್ಥಿಗಳ ವಿಚಾರಣಾ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಸಭೆಯು ಚರ್ಚಿಸಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು.<br><br>1. ವಿಚಾರಣಾ ಸಮಿತಿ ರಚಿಸುವುದು. ಸದರಿ ಸಮಿತಿಗೆ ಓರ್ವ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡುವುದು.<br>2. ಮಹಾವಿದ್ಯಾಲಯದಲ್ಲಿ MPLEC ನಕಲು ಪ್ರಕರಣಗಳಲ್ಲಿ 10ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಭಾಗಿಯಾದರೆ ಅಂತಹ ಮಹಾವಿದ್ಯಾಲಯಗಳಿಗೆ ಮೊದಲು ಎಚ್ಚರಿಕೆ ಪತ್ರ ನೀಡುವುದು. ಆದಾಗ್ಯೂ ಸುಧಾರಣೆ ಕಂಡು ಬರದಿದ್ದರೆ, ಮಹಾವಿದ್ಯಾಲಯಗಳಿಗೆ ದಂಡ ವಿಧಿಸುವುದು. |

| | | |
|---|---|---|
| 33 | 2026/07/33 | 2025-26ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದ ದಿನಭತ್ಯೆ (DA) ದರಗಳ ಪರಿಷ್ಕರಣೆಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು. |
| | **ತೀರ್ಮಾನ** | ರಾಜ್ಯದ ವಿಶ್ವವಿದ್ಯಾಲಯಗಳ ಏಕರೂಪ ಶುಲ್ಕ ತಜ್ಞರ ಸಮಿತಿಯು ವಿವಿಧ ಪರೀಕ್ಷಾ ಕಾರ್ಯಗಳಿಗೆ ನಿಗದಿಪಡಿಸಲಾದ ಸೇವಾ ದರಗಳನ್ನು ಪ್ರತಿ ವರ್ಷ ಸರಾಸರಿ ಶೇಕಡಾ 10 ರಷ್ಟು ಅಥವಾ ಪ್ರತಿ ಎರಡು ವರ್ಷಗಳಿಗೊಮ್ಮೆ ಸರಾಸರಿ ಶೇಕಡಾ 20 ರಿಂದ 25 ರಷ್ಟು ಹೆಚ್ಚಳ ಮಾಡಲು ಶಿಫಾರಸ್ಸು ಮಾಡಿದಂತೆ ಹಾಗೂ ಸದರಿ ತಜ್ಞರ ಸಮಿತಿಯ ಶಿಫಾರಸ್ಸಿನಂತೆ 2025-26ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದ ದಿನಭತ್ಯೆಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ ದರಕ್ಕಿಂತ ಶೇಕಡಾ 10 ರಷ್ಟು ದರವನ್ನು ಹೆಚ್ಚಿಸಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 34 | 2026/07/34 | 2026-27ನೇ ಶೈಕ್ಷಣಿಕ ಸಾಲಿನಿಂದ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪರೀಕ್ಷಾ ಶುಲ್ಕಗಳನ್ನು ಹೆಚ್ಚಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು ದಿನಾಂಕ: 09-02-2026 ರಂದು ತೆಗೆದುಕೊಂಡ ತೀರ್ಮಾನದನ್ವಯ, Non-UGC ವೇತನ ಪಡೆಯುತ್ತಿರುವ ಪ್ರಾಚಾರ್ಯರ ಮಾದರಿಯಲ್ಲೇ UGC ವೇತನ ಪಡೆಯುತ್ತಿರುವ ಪ್ರಾಚಾರ್ಯರಿಗೂ ಸಹ ಸ್ಥಳೀಯ ಭತ್ಯೆಯನ್ನು ನೀಡಲಾಗಿದೆ. ಅಲ್ಲದೇ, ಸ್ನಾತಕ ಕೋರ್ಸಗಳ ಸಮ ಸೆಮಿಸ್ಟರ್‌ಗಳ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಿರ್ವಹಿಸಿದ ಅಧ್ಯಾಪಕರಿಗೆ ಶೇಕಡಾ 10 ರಷ್ಟು ದಿನ ಭತ್ಯೆಯನ್ನು ಹೆಚ್ಚಿಸಲಾಗಿದೆ.<br><br>ವಿಶ್ವವಿದ್ಯಾಲಯದ ಆಡಳಿತ ಸುಧಾರಣಾ ಸಮಿತಿಯ ಶಿಫಾರಸ್ಸಿನಂತೆ, ಮೌಲ್ಯಮಾಪನ ಕಾರ್ಯದಲ್ಲಿ ದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಆಧುನಿಕ ತಂತ್ರಜ್ಞಾನ ಆಧಾರಿತ 'ಗಣಕೀಕೃತ ಮೌಲ್ಯಮಾಪನ' (Digital Valuation) ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವ ಉದ್ದೇಶವನ್ನು ಕೂಡಾ ವಿಶ್ವವಿದ್ಯಾಲಯವು ಹೊಂದಿರುತ್ತದೆ.<br><br>ಪ್ರಸ್ತುತ, ಹೀಗೆ ವಿಶ್ವವಿದ್ಯಾಲಯವು ಹೆಚ್ಚುತ್ತಿರುವ ತನ್ನ ಖರ್ಚು-ವೆಚ್ಚಗಳನ್ನು ಸರಿದೂಗಿಸಿಕೊಳ್ಳಲು, ವಿವಿಧ ಪರೀಕ್ಷಾ ಕಾರ್ಯಗಳಿಗೆ ಶಿಫಾರಸ್ಸು ಮಾಡಲಾದ ದರಗಳಿಗೆ ಪ್ರತಿ ವರ್ಷ ಸರಾಸರಿ ಶೇಕಡಾ 10 ರಷ್ಟು ಅಥವಾ ಪ್ರತಿ ಎರಡು ವರ್ಷಗಳಿಗೊಮ್ಮೆ ಸರಾಸರಿ ಶೇಕಡಾ 20 ರಿಂದ 25 ರಷ್ಟು ಶುಲ್ಕ ಹೆಚ್ಚಳ ಮಾಡಲು ರಾಜ್ಯದ ವಿಶ್ವವಿದ್ಯಾಲಯಗಳ ಏಕರೂಪ ಶುಲ್ಕ ತಜ್ಞರ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.<br><br>ಆದ್ದರಿಂದ, ಏಕರೂಪ ಶುಲ್ಕದ ವರದಿಯಲ್ಲಿನ ಶಿಫಾರಸ್ಸಿನಂತೆ ವಿಶ್ವವಿದ್ಯಾಲಯವು ತನ್ನ ಖರ್ಚು-ವೆಚ್ಚಗಳನ್ನು ಸರಿದೂಗಿಸಿಕೊಳ್ಳಲು 2026-27ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪರೀಕ್ಷಾ ಶುಲ್ಕಗಳನ್ನು ಈ ಕೆಳಕಾಣಿಸಿದಂತೆ ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು.<br><br>1. ಸ್ನಾತಕ ಮತ್ತು ಸ್ನಾತಕೋತ್ತರ ವೃತ್ತಿಪರ ಕೋರ್ಸ್‌ಗಳಿಗೆ (Profesional Course) - 20%<br>2. ಸ್ನಾತಕ ಮತ್ತು ಸ್ನಾತಕೋತ್ತರ ವೃತ್ತಿಪರ ಅಲ್ಲದ ಕೋರ್ಸ್‌ಗಳಿಗೆ (Non Profesional Course) – 15% |

| | | |
|---|---|---|
| 35 | 2026/07/35 | 2026-27ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಅಂಕಪಟ್ಟಿ, ಉತ್ತೀರ್ಣ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರ ಹಾಗೂ ಇತರೆ ಶೈಕ್ಷಣಿಕ ದಾಖಲೆಗಳಲ್ಲಿ ವಿಶ್ವವಿದ್ಯಾಲಯದ ಹೆಸರನ್ನು **"ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ"** ಎಂದು ಮುದ್ರಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2025-26ನೇ ಸಾಲಿನ ವರೆಗಿನ ವಿದ್ಯಾರ್ಥಿಗಳ ಅಂಕಪಟ್ಟಿ, ಉತ್ತೀರ್ಣ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರ, ಹಾಗೂ ಇತರೆ ಶೈಕ್ಷಣಿಕ ದಾಖಲೆಗಳಲ್ಲಿ ವಿಶ್ವವಿದ್ಯಾಲಯದ ಹೆಸರನ್ನು "ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮುದ್ರಿಸಲಾಗುತ್ತಿತ್ತು. ಮುಂದುವರೆದು, ಸರ್ಕಾರದ ಅಧಿಸೂಚನೆ (ಸಂ. ಸಂವ್ಯಶಾಇ 86 ಶಾಸನ 2025 ಬೆಂಗಳೂರು ದಿ:08-01-2026) ರಸ್ತೆಯ "ರಾಣಿ ಚನ್ನಮ್ಮ ವಿಶ್ವವಿದ್ಯಾಲಯ'ದ ಬದಲಾಗಿ 'ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮರುನಾಮಕರಣವಾಗಿರುವ ನಿಟ್ಟಿನಲ್ಲಿ ಮತ್ತು ದಿನಾಂಕ 30-05-2026 ರಂದು ಜರುಗಿದ ಸಿಂಡಿಕೇಟ್ ಸಭೆಯ ತಿರ್ಮಾನದನ್ವಯ, 2026-27ನೇ ಸಾಲಿನಿಂದ ವಿದ್ಯಾರ್ಥಿಗಳ ಅಂಕಪಟ್ಟಿ, ಉತ್ತೀರ್ಣ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರ ಹಾಗೂ ಇತರೆ ಶೈಕ್ಷಣಿಕ ದಾಖಲೆಗಳಲ್ಲಿ 'ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ನಮೂದಿಸಿ ಮುದ್ರಿಸಲು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ವಿಶ್ವವಿದ್ಯಾಲಯ ಬದಲಾದ ಪದನಾಮದಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇಂಗ್ಲೀಷನಲ್ಲಿ Formerly known as Rani Channamma University ಎಂದು ಮತ್ತು ಕನ್ನಡದಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದೊಂದಿಗೆ ಹಿಂದಿನ ಪದನಾಮ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಎಂದು ಪತ್ರ ವ್ಯವಹಾರ ಮಾಡಲು ಮತ್ತು ಅಂಕಪಟ್ಟಿಗಳಲ್ಲಿ ಅಳವಡಿಸಿಕೊಳ್ಳಲು Exam/CDC/DPAR/GAD/Academic ಗೆ ಕ್ರಮವಹಿಸಲು ಸಭೆಯು ಅನುಮೋದನೆ ನೀಡಿತು. |
| 36 | 2026/07/36 | 2026-27ನೇ ಸಾಲಿನ ಮೊದಲನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27ನೇ ಸಾಲಿನ ಮೊದಲನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಸಭೆಯು ಅನುಮೋದನೆ ನೀಡಿತು. |
| 37 | 2026/07/37 | ವೈಧ್ಯಕೀಯ ವೆಚ್ಚಗಳನ್ನು ಪಾವತಿಸಲು ಪರಿನಿಯಮಗಳನ್ನು ರಚಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27 ನೇ ಸಾಲಿನ ಮೊದಲನೇ ಹಣಕಾಸು ಸಮಿತಿ ಸಭೆಯಲ್ಲಿ ವೈಧ್ಯಕೀಯ ವೆಚ್ಚಗಳನ್ನು ಪಾವತಿಸಲು ಪರಿನಿಯಮಗಳನ್ನು ಈಗಾಗಲೇ ಹಣಕಾಸು ಸಮಿತಿ ಸಭೆಯಲ್ಲಿ ಪರಿಷ್ಕರಿಸಲಾಗಿದ್ದು, ಸದರಿ ಪರಿನಿಯಮಗಳಿಗೆ ಸಭೆಯು ಅನುಮೋದನೆ ನೀಡಿತು. |
| 38 | 2026/07/38 | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿ ನೂತನ ಆವರಣದ ಕಟ್ಟಡ ಕಾಮಗಾರಿ ಗುಣಮಟ್ಟ ಪರಿಶೀಲನಾ ಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದ ಹಿರೇಬಾಗೇವಾಡಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನೀಯರಿಂಗ್ ವಿಭಾಗದಿಂದ ನಡೆಯುತ್ತಿರುವ ಕಟ್ಟಡಗಳ ಕಾಮಗಾರಿಯ ಗುಣಮಟ್ಟದ ಬಗ್ಗೆ ಪರಿಶೀಲಿಸಲು ದಿನಾಂಕ: 19-05-2026 ರಂದು ಶ್ರೀ. ಶಿವಪುತ್ರ ಎಸ್. ಖಣಗಾವಿ ನಿವೃತ್ತ ಮುಖ್ಯ ಅಭಿಯಂತರರ ಅಧ್ಯಕ್ಷತೆಯಲ್ಲಿ ಜರುಗಿದ ಗುಣಮಟ್ಟ ಪರಿಶೀಲನಾ ಸಭೆಯು ನಡಾವಳಿಗಳಿಗೆ ಸಭೆಯು ಅನುಮೋದನೆ ನೀಡಿತು. |

<table>
<tr><td>39</td><td>2026/07/39</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಖರೀದಿ ಸಮಿತಿ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಖರೀದಿ ಸಮಿತಿ ನಡಾವಳಿಗಳನ್ನು ಈ ಕೆಳಕಾಣಿಸಿದ ಅಂಶಗಳ ಅವಲೋಕನ/ನಿರ್ಣಯದೊಂದಿಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.<br><br>A). Purchase of L2 Smart Manageable Data Network Switches for all New Buildings of New Campus (Due to non-implementation by BSR Contractor)<br>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿ ನೂತನ ಆವರಣದ ಕಟ್ಟಡಗಳಿಗೆ L2 Smart Manageable Data Network Switches ಗಳನ್ನು ಅಳವಡಿಸಬೇಕಾಗಿದ್ದು, BSR ಗುತ್ತಿಗೆದಾರರು 4 ವರ್ಷಗಳಷ್ಟು ಹಳೆಯದಾದ (Old Model) unmanaged normal Switches ಗಳನ್ನು ಅಳವಡಿಸುತ್ತಿರುವುದರಿಂದ, ಸದರಿ Switchesಗಳ ಅಳವಡಿಕೆಯನ್ನು ರದ್ದುಪಡಿಸಿ Switches ಗಳ ಮೊತ್ತವನ್ನು ಗುತ್ತಿಗೆದಾರರಿಗೆ ಭರಿಸದೇ, ವಿವಿಧ ವಸ್ತುಗಳ ಮೊತ್ತವನ್ನು Itemwise ಭರಿಸುವ ಕುರಿತು ಸಂಬಂಧಪಟ್ಟ ಅಧಿಕಾರಿಯವರಿಗೆ ಪತ್ರ ಬರೆಯಲು ತೀರ್ಮಾನಿಸಿದೆ ಹಾಗೂ ವಿಶ್ವವಿದ್ಯಾಲಯದಿಂದ ಟೆಂಡರ್ ಆಹ್ವಾನಿಸಿ ಖರೀದಿಸಲು ಸಭೆ ಶಿಫಾರಸ್ಸು ಮಾಡಿತು.<br><br>B) ವಿಶ್ವವಿದ್ಯಾಲಯದ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು Digital Evaluation ಮುಖಾಂತರ ಜಾರಿಗೊಳಿಸಲು ಸೇವೆ ಪಡೆದುಕೊಳ್ಳುವ ಕುರಿತು.<br>ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಹೆಚ್ಚು ಪಾರದರ್ಶಕ, ನಿಖರ ಮತ್ತು ತ್ವರಿತವಾಗಿ ಕೈಗೊಳ್ಳಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಮೌಲ್ಯಮಾಪನ ಕಾರ್ಯವನ್ನು Digital Evaluation ಮುಖಾಂತರ ಜಾರಿಗೊಳಿಸಲು KTPP ನಿಯಮಾವಳಿಗಳ ಪ್ರಕಾರ ಟೆಂಡರ್ ಆಹ್ವಾನಿಸಿ, ಟೆಂಡರ್ ಪ್ರಕ್ರಿಯೆ ಅಂತಿಮಗೊಂಡ ಬಳಿಕ Digital Evaluation ಕಾರ್ಯವನ್ನು (1+1=2 ವರ್ಷಕ್ಕೆ) ವಿಶ್ವವಿದ್ಯಾಲಯದಲ್ಲಿ ಅವಳಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು ಹಾಗೂ ಈ ಕುರಿತು ಪ್ರಸ್ತುತ ಮೌಲ್ಯಮಾಪನ ಕಾರ್ಯಗಳಿಗೆ ತಗಲುವ ವೆಚ್ಚಗಳ ತಃಖ್ತೆಯೊಂದಿಗೆ ಸದರಿ Digital Evaluation ಗೆ ತಗಲುವ ಸಂಪೂರ್ಣ ವೆಚ್ಚಗಳನ್ನು ಹೋಲಿಸಿ ಮುಂದಿನ ಕ್ರಮ ವಹಿಸಲು ಸಭೆಯು ಸೂಚಿಸಿತು.</td></tr>
<tr><td>40</td><td>2026/07/40</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಾಮಗಾರಿ ಸಮಿತಿ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.</td></tr>
<tr><td></td><td>ತೀರ್ಮಾನ</td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ದಿನಾಂಕ: 20-07-2026 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಈ ಕೆಳಕಣಿಸಿದಂತೆ ಮಂಡಿಸಲಾಯಿತು.<br><br>
<table>
<tr><th>ಕ್ರ.ಸಂ.</th><th>ಟಿಪ್ಪಣಿ</th><th>ಅಂದಾಜು ಮೊತ್ತ</th></tr>
<tr><td>1</td><td>Construction of Compound Wall Phase-01 & Phase-02 for Rani Channamma University at Hirebagewadi New Campus, Belagavi ಕಾಮಗಾರಿಗೆ ಘಟನೋತ್ತರವಾಗಿ EOT ಗೆ ಅನುಮೋದನೆ ನೀಡುವ ಕುರಿತು.</td><td>-</td></tr>
<tr><td></td><td>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ, ಹಿರೇಬಾಗೇವಾಡಿಯಲ್ಲಿ Construction of Compound Wall for Rani</td><td></td></tr>
</table></td></tr>
</table>

| | | |
|---|---|---|
| | Channamma University at Hirebagewadi New Campus Belagavi ಕಾಮಗಾರಿಯನ್ನು ನಿಗಧಿತ ಸಮಯದೊಳಗೆ ಪೂರ್ಣಗೊಳಿಸದ ಕಾರಣ ಹಾಗೂ ಪದೇ ಪದೇ ರೈತರ ತಕರಾರು ಮಾಡುವ ಕಾರಣ, ಕಾಮಗಾರಿಯಲ್ಲಿನ Rectification ಗಳ ಕಾರ್ಯವನ್ನು ವಿಶ್ವವಿದ್ಯಾಲಯದ ಕಟ್ಟಡ ವಿಭಾಗದಿಂದ ನಿರ್ವಹಿಸಲಾಗಿದ್ದು, ಪ್ರಸ್ತುತವರೆಗೆ 3.5 ಕಿ.ಮೀ. ಉದ್ದದ ಆವರಣ ಗೋಡೆಯ ಕಾಮಗಾರಿಯು ಪೂರ್ಣಗೊಂಡಿದ್ದು, 3.5 ಕಿ. ಮೀ ಗೆ ಅಂತಿಮಗೊಳಿಸಿ ಕಾಮಗಾರಿಯ EOT ನೀಡಿ, EIRL & Workslip ನಂತೆ ಸದರಿ ಕಾಮಗಾರಿಯ ಮೊತ್ತವನ್ನು ಪಾವತಿಸಿ, ಯಥಾಸ್ಥಿತಿಯಲ್ಲಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ದಿನಾಂಕ: 30.05.2026 ರಂದು ಸಿಂಡಿಕೇಟ್ ಸಭೆಯು EOT ಯೊಂದಿಗೆ ಅನುಮೋದನೆಯನ್ನು ನೀಡಿರುತ್ತದೆ. (ದಿನಾಂಕವನ್ನು ನಮೂದಿಸಿರುವುದಿಲ್ಲ). ಕಾರಣ, ಸದರಿ ಕಾಮಗಾರಿಯ EOT ಯನ್ನು ದಿನಾಂಕ: 31.03.2025 ರಿಂದ ದಿನಾಂಕ: 15.10.2025 ರವರೆಗೆ ಅವಧಿ ವಿಸ್ತರಿಸಿ ಘಟನೋತ್ತರ ಅನುಮತಿಗಾಗಿ ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಒಮ್ಮತದಿಂದ ಒಪ್ಪಿ, ದಿನಾಂಕ: 15.10.2025 ರವರೆಗೆ ಅವಧಿ ವಿಸ್ತರಣೆಗೆ ಘಟನೋತ್ತರವಾಗಿ ನೀಡಲು ಸಭೆಯು ಶಿಫಾರಸ್ಸನ್ನು ನೀಡಿತು. | |

| ಕ್ರ.ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 2 | **"Upgradation to Auditorium and other works in Evaluation block at premises of new campus, Hirebagewadi, Belagavi" ಕಾಮಗಾರಿಯ ಅಂದಾಜು ಮೊತ್ತವನ್ನು ರೂ. 3.70 ಕೋಟಿಗಳಿಗೆ ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು.** | **ರೂ. 3.70 ಕೋಟಿ** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಘಟಿಕೋತ್ಸವ ಹಾಗೂ ಇತರ ಉನ್ನತ ಮಟ್ಟದ ಸಭೆ, ಸಮಾರಂಭಗಳನ್ನು ಈ ಮೊದಲಿನಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆ.ಎಲ್.ಇ ಸಂಸ್ಥೆಯ ಮಹಾವಿದ್ಯಾಲಯ, ಬೆಳಗಾವಿ, ಕುಮಾರ ಗಂಧರ್ವ ಸಭಾಂಗಣ ಹಾಗೂ ಇತರ ಖಾಸಗಿ ಆಡಿಟೋರಿಯಮ್‌ನಲ್ಲಿ ಬಾಡಿಗೆ ಆಧಾರದ ಮೇಲೆ ನಡೆಸಲಾಗುತ್ತಿರುತ್ತದೆ. ಕಾರಣ, ನೂತನ ಅವರಣದ ಪರೀಕ್ಷಾಂಗ ಕಟ್ಟಡದಲ್ಲಿ ರೂ. 2.50 ಕೋಟಿಗಳ ಅಂದಾಜು ಪಟ್ಟಿಯಂತೆ Auditorium ನಿರ್ಮಿಸಲು ದಿನಾಂಕ: 06.04.2026 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿತ್ತು. ತದನಂತರ, ಸದರಿ ಅಡಿಟೋರಿಯಮ್‌ನಲ್ಲಿ ಮೊದಲಿದ್ದ PVC ಆಧಾರಿತ Panels ಗಳನ್ನು Acoustic wall Paneling, treatment, acoustic wall cladding, acoustic grid ceiling, acoustic flowing mat, stage wooden flooring, chairs, etc. ಗಳನ್ನು ಅಳವಡಿಸಿ ಕ್ರಮಕೈಗೊಳ್ಳುವಂತೆ ವಿಶ್ವವಿದ್ಯಾಲಯದ ಉನ್ನತ ಅಧಿಕಾರಿಗಳು ಸೂಚಿಸಿದ್ದರಿಂದ, ರೂ. 3.00 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿ ದಿನಾಂಕ: 30.05.2026 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿತ್ತು. | |

| | | | | |
|---|---|---|---|---|
| | | | ಸದರಿ ಆಡಿಟೋರಿಯಮ್‌ನಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ನವೀನ ಕೌಶಲ್ಯಗಳನ್ನು ಒಳಗೊಳ್ಳುವಂತೆ ಕ್ರಮಕೈಗೊಳ್ಳಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆ.ಎಲ್.ಇ ಸಂಸ್ಥೆಯ, ಮಹಾವಿದ್ಯಾಲಯ, ಬೆಳಗಾವಿ, ಕುಮಾರ ಗಂಧರ್ವ ಸಭಾಂಗಣ ಹಾಗೂ ವಿವಿಧ ಇಲಾಖೆಗಳಲ್ಲಿನ ಈ ರೀತಿಯ ಹಲವು ಆಡಿಟೋರಿಯಮ್‌ಗಳನ್ನು ಪರಿವೀಕ್ಷಿಸಿ, ವಿವಿಧ ಇಲಾಖೆ/ ವಿಭಾಗಗಳಲ್ಲಿ ಅಳವಡಿಸಿಕೊಂಡಿರುವಂತಹ ನಾವಿನ್ಯತೆಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಈ ಮುಂದಿನ ಅಂಶಗಳಂತೆ ಪರಿಷ್ಕರಿಸಿ, ಕ್ರಮವಹಿಸಬೇಕಾಗಿರುತ್ತದೆ.<br><br>ಸದರಿ ಆಡಿಟೋರಿಯಮ್‌ನಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ನವೀನ ಕೌಶಲ್ಯಗಳನ್ನು ಒಳಗೊಳ್ಳುವಂತೆ ಕ್ರಮಕೈಗೊಳ್ಳಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆ.ಎಲ್.ಇ ಸಂಸ್ಥೆಯ, ಮಹಾವಿದ್ಯಾಲಯ, ಬೆಳಗಾವಿ, ಕುಮಾರ ಗಂಧರ್ವ ಸಭಾಂಗಣ ಹಾಗೂ ವಿವಿಧ ಇಲಾಖೆಗಳಲ್ಲಿನ ಈ ರೀತಿಯ ಹಲವು ಆಡಿಟೋರಿಯಮ್‌ಗಳನ್ನು ಪರಿವೀಕ್ಷಿಸಿ, ವಿವಿಧ ಇಲಾಖೆ/ ವಿಭಾಗಗಳಲ್ಲಿ ಅಳವಡಿಸಿಕೊಂಡಿರುವಂತಹ ನಾವಿನ್ಯತೆಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಈ ಮುಂದಿನ ಅಂಶಗಳಂತೆ ಪರಿಷ್ಕರಿಸಿ, ಕ್ರಮವಹಿಸಬೇಕಾಗಿರುತ್ತದೆ.<br><br>• ಈ ಮೊದಲಿದ್ದ ಅಡಿಟೋರಿಯಮ್‌ನಲ್ಲಿನ ಆಸನದ ವ್ಯವಸ್ಥೆಗೆ ಬಳಸಿದ್ದ ಕುರ್ಚಿಗಳ ಬದಲಾಗಿ VIP ಕುರ್ಚಿಗಳನ್ನು ಅಳವಡಿಸಿಕೊಳ್ಳಲಾಗಿದೆ.<br>• Flooring ನಿಂದ ಹಿಡಿದು ಸುಸಜ್ಜಿತವಾದ, ಸುಂದರ ಮತ್ತು ನವೀನ ತಂತ್ರಜ್ಞಾನವನ್ನು ಹೊಂದಿರುವಂತಹ ಬದಲಾವಣೆಗಳನ್ನು ಅಳವಡಿಸಿಕೊಳ್ಳಲಾಗಿದೆ.<br>• 30 ಟನ್ ಸಾಮರ್ಥ್ಯದ AC ಗಳನ್ನು ಹೆಚ್ಚುವರಿ 80 ಟನ್ ಸಾಮರ್ಥ್ಯಕ್ಕೆ ಹೆಚ್ಚಿಸಿ, VRF outdoor AC Control ನ್ನು ಅಳವಡಿಸಿಕೊಳ್ಳಲಾಗಿದೆ.<br>• Auditorium ನಲ್ಲಿ ನವೀನ ತಂತ್ರಜ್ಞಾನದ ಸ್ಪೀಕರ್‌ಗಳಿಗೆ ಸರಿಹೊಂದುವಂತೆ ಒಳ್ಳೆ ಗುಣಮಟ್ಟದ ಕೇಬಲ್‌ನ್ನು ಅಳವಡಿಸಿಕೊಳ್ಳಲಾಗಿದೆ.<br><br>ಕಾರಣ, ರೂ. 3.00 ಕೋಟಿಗೆ ಸೀಮಿತವಾಗಿದ್ದ Auditorium ನ ಅಂದಾಜು ಪಟ್ಟಿಯಲ್ಲಿ ಈ ಮೇಲೆ ವಿವರಿಸಿದಂತ ಎಲ್ಲ ಬದಲಾವಣೆಗಳನ್ನು ಮಾಡಿಕೊಂಡು ರೂ. 3.70 ಕೋಟಿಗಳವರೆಗೆ ಪರಿಷ್ಕರಿಸಿದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಅದರನ್ವಯ ಕಾಮಗಾರಿಯನ್ನು ಕೈಗೊಳ್ಳಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ.ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 3 | **Providing fencing work for new campus of RCU, Hirebagewadi, Belagavi ಕಾಮಗಾರಿಯ ಅಂದಾಜು ಮೊತ್ತವನ್ನು ರೂ. 75.00 ಲಕ್ಷಗಳಿಗೆ ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು. .** | **ರೂ. 75 ಲಕ್ಷ** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ, ಹಿರೇಬಾಗೇವಾಡಿಯಲ್ಲಿ 2.2 ಕಿ.ಮೀ ವ್ಯಾಪ್ತಿಯಲ್ಲಿ ವಿಶ್ವವಿದ್ಯಾಲಯದ ಆವರಣದ ಸುರಕ್ಷತೆಗಾಗಿ Providing fencing work for new campus of RCU, Hirebagewadi, Belagavi ಯ ಕಾಮಗಾರಿಯನ್ನು ರೂ. 65.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಸದರಿ ಅಂದಾಜು ಪಟ್ಟಿಯಲ್ಲಿ ಕಂಬಗಳನ್ನು 10 ಅಡಿಗಳ ಅಂತರದಲ್ಲಿ ಅಳವಡಿಸುವಂತೆ ಮಾಡಲಾಗಿದ್ದು, ತಾಂತ್ರಿಕ ಅನುಮೋದನೆ ನೀಡುವ ಸಂದರ್ಭದಲ್ಲಿ ಅಭಿಯಂತರರು Fencing ಗಾಗಿ ಕಂಬಗಳನ್ನು 10 ಅಡಿಗಳ ಅಂತರದಲ್ಲಿ ಅಳವಡಿಸಿದಲ್ಲಿ Fencing ತೂಗುವಂತಾಗುತ್ತದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿ Fencing ಕಾರ್ಯದ ಕ್ಷಮತೆಯು ಕಡಿಮೆಯಾಗುವುದರಿಂದ ಸದರಿ ಕಂಬಗಳನ್ನು 6 ಅಡಿಗಳ ಅಂತರದಲ್ಲಿ ಅಳವಡಿಸುವಂತೆ ಪರಿಷ್ಕರಣೆ ಮಾಡಿಕೊಳ್ಳಲಾಗಿದ್ದು, ಸದರಿ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ. 75.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಹಾಗೂ ಅದರಂತೆ, ಕಾಮಗಾರಿಯನ್ನು ಮುಂದುವರೆಸಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಒಮ್ಮತದಿಂದ ಒಪ್ಪಿ, ಕಾಮಗಾರಿಯನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. | |

| ಕ್ರ.ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 4 | **Interior work to Administrative and Examination buildings at Kitturu Rani Channamma University, Hirebagewadi New Campus, Belagavi ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.** | **ರೂ. 2.00 ಕೋಟಿ** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ರಾಜ್ಯದ ಅತೀ ದೊಡ್ಡ ವಿಶ್ವವಿದ್ಯಾಲಯವಾಗಿದ್ದು, ರಾಜ್ಯದ ಎರಡು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಾನ್ಯ ಕರ್ನಾಟಕ ಸರ್ಕಾರದಿಂದ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಗ್ರಾಮದ ಮಲ್ಲಪ್ಪನ ಗುಡ್ಡದಲ್ಲಿ 127 ಎಕರೆ ಜಮೀನನ್ನು ನೀಡಿದ್ದು, ಪ್ರಸ್ತುತ ರೂ. 137.00 ಕೋಟಿಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮುಕ್ತಾಯದ ಹಂತದಲ್ಲಿರುತ್ತವೆ. ನೂತನ ಆವರಣದಲ್ಲಿ ಆಡಳಿತ ಹಾಗೂ ಪರೀಕ್ಷಾಂಗ ಕಟ್ಟಡಗಳನ್ನು ಭವ್ಯವಾಗಿ ನಿರ್ಮಿಸಲಾಗಿದೆ.<br><br>ಪ್ರಸ್ತುತ ನೂತನ ಅವರಣದಲ್ಲಿ IIT ಗೆ ಸರಿಸಮಾನವಾಗಿ ವಿಜ್ಞಾನ ವಿಭಾಗದ ಉನ್ನತ ಮಟ್ಟದ ಪ್ರಯೋಗಾಲಯ ಉಪಕರಣಗಳನ್ನು | |

PM-USHA (MERU) ಅಡಿಯಲ್ಲಿ ಖರೀದಿಸಲಾಗಿದ್ದು, ಸದರಿ ಉಪಕರಣಗಳನ್ನು ವಿವಿಧ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರಾಧ್ಯಾಪಕರುಗಳು/ ಸಂಶೋಧನಾರ್ಥಿಗಳು/ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಬಳಸಲು ಅವಕಾಶ ಕಲ್ಪಿಸುವ ಯೋಜನೆಯನ್ನು ರೂಪಿಸಲಾಗಿದೆ. ಅದರಂತೆ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿ ನೀಡುವುದರಿಂದ ಆಡಳಿತ ಹಾಗೂ ಪರೀಕ್ಷಾಂಗ ಕಟ್ಟಡಗಳ ಪ್ರವೇಶ ದ್ವಾರ ಹಾಗೂ ಒಳಾಂಗಣದಲ್ಲಿ Interior work to Administrative and Examination buildings at Kitturu Rani Channamma University. Hirebagewadi New Campus, Belagavi ಕಾಮಗಾರಿಯನ್ನು ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. ಸದರಿ ಕಾಮಗಾರಿಗೆ ರೂ. 200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ Interior ಕಾಮಗಾರಿಯನ್ನು ಕೈಗೊಳ್ಳಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು.

| ಕ್ರ. ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 5 | **Providing and fixing of Lift/ Elevator and other works in Evaluation block at premises of Kitturu Rani Channamma University, new campus, Hirebagewadi, Belagavi" ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.** | **ರೂ. 25.00 ಲಕ್ಷಗಳು** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ, ಹಿರೇಬಾಗೇವಾಡಿಯಲ್ಲಿನ ನೂತನ ಆವರಣದಲ್ಲಿನ ಪರೀಕ್ಷಾಂಗ ಕಟ್ಟಡದಲ್ಲಿ ವಿಶ್ವವಿದ್ಯಾಲಯದಿಂದ ನಡೆಯುವ ಸಭೆ, ಘಟಿಕೋತ್ಸವ ಸಮಾರಂಭ, ಕಾರ್ಯಾಗಾರಗಳಿಗೆ ಸೀಮಿತಗೊಳಿಸಿ ಅಡಿಟೋರಿಯಮ್‌ನ್ನು ನಿರ್ಮಿಸಲಾಗಿರುತ್ತದೆ. ಸದರಿ ಆಡಿಟೋರಿಯಮ್ ಕಟ್ಟಡವು 2ನೇ ಮಹಡಿಯಲ್ಲಿದ್ದು, Lift/ Elevator ಅಳವಡಿಸಲು ಸಿವಿಲ್ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಘಟಿಕೋತ್ಸವ ಸಮಾರಂಭಕ್ಕೆ ರಾಜ್ಯದ ಘನತೆವೆತ್ತ ರಾಜ್ಯಪಾಲರು ಹಾಗೂ ಗಣ್ಯ ಅತಿಥಿಗಳು ಆಗಮಿಸುವುದರಿಂದ Lift/ Elevator ನ್ನು ಅಳವಡಿಸುವುದು ಅತೀ ಅವಶ್ಯಕವಿರುತ್ತದೆ.<br><br>ಸದರಿ Lift/ Elevator ನ್ನು ಅಳವಡಿಸುವ ಮುಂಚಿತವಾಗಿ Electrical Safety Inspector ಇವರಿಗೆ ವಿಭಾಗದ ನಿಗದಿತ ಶುಲ್ಕವನ್ನು ಭರಿಸಿ ಅನುಮೋದನೆ ಪಡೆದುಕೊಂಡು ಕಾಮಗಾರಿಯ ನಂತರ ಮತ್ತೇ Lift/ Elevator ನ್ನು ಸುರಕ್ಷಿತವಾಗಿ, ಸರಿಯಾಗಿ ಅಳವಡಿಸಿ ನಿರ್ವಹಣೆಗೊಳಿಸಿದ ಕುರಿತು ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.<br><br>ಕಾರಣ, ನೂತನ ಆವರಣದ ಪರೀಕ್ಷಾಂಗ ಕಟ್ಟಡದಲ್ಲಿ Machine less room ಇದ್ದು, 10 ಜನರಿಗೆ ಸ್ಥಳಾವಕಾಶವಾಗುವಂತೆ ರೂ. 25.00 ಲಕ್ಷಗಳಲ್ಲಿ Providing and fixing of Lift Elevator and other works in Evaluation block at premises of Kitturu Rani Channamma University, new campus, Hirebagewadi, Belagavi" ಕಾಮಗಾರಿಯನ್ನು ಕೈಗೊಳ್ಳಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ.ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 6 | **Renovation in Academic buildings (Phase-01) for establishment of departments labs in the premises of Kitturu Rani Channamma University, New Campus, Hirebagewadi, Belagavi ಅಂದಾಜು ಮೊತ್ತವನ್ನುರೂ. 1.75 ಕೋಟಿಗಳಿಗೆ ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು.** | **ರೂ. 1.75 ಕೋಟಿ** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದ ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗೋಳಶಾಸ್ತ್ರ ವಿಭಾಗಗಳ ಹಾಗೂ ಭಾಷಾ ಪ್ರಯೋಗಾಲಯ (Languages Lab) ಕೊಠಡಿಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ನೂತನ ಆವರಣದಲ್ಲಿ IIT ಗೆ ಸರಿಸಮಾನವಾಗಿ ವಿಜ್ಞಾನ ವಿಭಾಗದ ಉನ್ನತ ಮಟ್ಟದ ಪ್ರಯೋಗಾಲಯ ಉಪಕರಣಗಳನ್ನು PM-USHA (MERU) ಅಡಿಯಲ್ಲಿ ಖರೀದಿಸಲಾಗಿದ್ದು, ಸದರಿ ಉಪಕರಣಗಳನ್ನು ಅಳವಡಿಸಲು ಉಪಕರಣಗಳಿಗೆ ತಕ್ಕಂತೆ ಪ್ರಯೋಗಾಲಯಗಳನ್ನು ನಿರ್ಮಿಸಬೇಕಾಗಿದ್ದರಿಂದ ರೂ. 1.50 ಕೋಟಿಗಳ ವೆಚ್ಚದಲ್ಲಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು.<br><br>ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳು ಕಟ್ಟಡಗಳ ಹಾಗೂ ಪ್ರಯೋಗಾಲಯಗಳ ಪರಿವೀಕ್ಷಣೆಗೆ ಬಂದಿದ್ದ ಸಮಯದಲ್ಲಿ Metal ಹಾಗೂ Wood ನ್ನು ಪ್ರಯೋಗಾಲಯಗಳಲ್ಲಿ ಬಳಸಿದ್ದು, ರಸಾಯನಶಾಸ್ತ್ರ ಮತ್ತು ಕ್ರಿಮಿನಾಲಜಿ ವಿದ್ಯಾರ್ಥಿಗಳಿಗೆ ಪ್ರಯೋಗದ ಸಂದರ್ಭದಲ್ಲಿ Acid ಕೆಮಿಕಲ್ಸ್‌ಗಳನ್ನು, ನೀರನ್ನು ಬಳಸಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ಕೆಮಿಕಲ್ಸ್, ನೀರು ಕೆಳಗೆ ಬೀಳುವ ಸಾಧ್ಯತೆ ಇರುವುದರಿಂದ Metal ಹಾಗೂ Wood ಶೀಟ್‌ಗಳು ಹಾಳಾಗುವ ಸಂಭವವಿರುತ್ತದೆ. ಕಾರಣ, Metal ಹಾಗೂ Wood ಶೀಟ್‌ಗಳ ಬದಲಾಗಿ pre-laminated ಶೀಟ್‌ಗಳನ್ನು ಅಳವಡಿಸಲು ಹಾಗೂ ಅವಶ್ಯವಿದ್ದಲ್ಲಿ Powder Coating ಮಾಡಿಸಬೇಕಾಗಿದ್ದು, ಅದರಂತೆ ರೂ. 1.75 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ಪರಿಷ್ಕರಿಸಲಾಗಿದ್ದು, ಸದರಿ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮ ಅನುಮೋದನೆ ನೀಡಿ, ಅದರಂತೆ ಕ್ರಮಕೈಗೊಳ್ಳಲು ಹಾಗೂ ಸದರಿ ಕಾಮಗಾರಿಯ ಹೆಸರನ್ನು Establishment of departments labs in Academic buildings (Phase-01) at Kitturu Rani Channamma University, New Campus, Hirebagewadi, Belagavi ಎಂದು ಬದಲಿಸಿಕೊಳ್ಳುವಂತೆ ಸೂಚಿಸಿ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ. ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 7 | **Construction of Dry wall partitions and other works for various departments at Phase-1 buildings, new campus, Sangolli Rayanna Constituent College and Main Campus Bhutaramanahatti of Rani Channamma University, Hirebagewadi, Belagavi ಕಾಮಗಾರಿಯ EIRL & Work slip ಗೆ ಅನುಮೋದನೆ ನೀಡುವ ಕುರಿತು.** | - |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದ ಆಡಳಿತ ಕಟ್ಟಡ, ಪರೀಕ್ಷಾಂಗ ಕಟ್ಟಡ, ವಿವಿಧ ವಿಭಾಗಗಳ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ವ್ಯವಸ್ಥಿತವಾಗಿ ಕಛೇರಿ ಕಾರ್ಯನಿರ್ವಹಿಸಲು Partition ಗಳನ್ನು ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಭಾಷಾ ವಿಭಾಗಗಳನ್ನು ಸ್ಥಳಾಂತರಗೊಳಿಸಿದ್ದು, ಸದರಿ ವಿಭಾಗಗಳ ಬೋಧಕ ಸಿಬ್ಬಂದಿಯವರಿಗೆ Staff Room ಹಾಗೂ ಕಛೇರಿ ಸಿಬ್ಬಂದಿಯವರಿಗೆ ಕಛೇರಿ ಕಾರ್ಯನಿರ್ವಹಿಸಲು Partition ಗಳನ್ನು ನಿರ್ಮಿಸಲಾಗುತ್ತಿದೆ. ಪ್ರಸ್ತುತ, ನೂತನ ಅವರಣದ ಕಟ್ಟಡಗಳಲ್ಲಿ Dry wall partitions ಗಳನ್ನು 8 ಅಡಿಗೆ ನಿರ್ಮಿಸುವಂತೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಸದರಿ 8 ಅಡಿಗೆ partitions ಗಳನ್ನು ಅಳವಡಿಸಿದಾಗ, ಕಟ್ಟಡದ Slab ನಿಂದ 4 ಅಡಿ ಗ್ಯಾಪ್ ಆಗುತ್ತಿದ್ದು, Support ಇಲ್ಲದ ಕಾರಣ partitions ಗಳು ಗಟ್ಟಿಯಾಗಿ ಕೂರದೇ, ಅಳುಗಾಡುವ ಸ್ಥಿತಿಯಲ್ಲಿರುತ್ತದೆ. ಕಾರಣ, ಸದರಿ Dry wall partitions ಗಳನ್ನು Support ಗಾಗಿ Beam to Beam ಗಳವರೆಗೆ ಹಾಗೂ Beam ಗಳು ಇಲ್ಲದಿರುವ ಜಾಗದಲ್ಲಿ Slab ವರೆಗೆ ವಿಸ್ತರಿಸಿ partitions ಗಳನ್ನು ಗಟ್ಟಿಯಾಗಿ ನಿರ್ಮಿಸಬೇಕಾಗಿರುತ್ತದೆ.<br><br>ಇದರೊಂದಿಗೆ ನೂತನ ಆವರಣದಲ್ಲಿ ಅಗತ್ಯವಿದ್ದಲ್ಲಿ Cubical ಗಳನ್ನು 4 ಅಡಿಗೆ ನಿರ್ಮಿಸುವಂತೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಸದರಿ Cubical ಗಳಿಗೆ support ಇಲ್ಲದೇ ಇರುವುದರಿಂದ ಗಟ್ಟಿಯಾಗಿ ಕೂರದೇ, ಅಳುಗಾಡುವ ಸ್ಥಿತಿಯಲ್ಲಿರುವುದರಿಂದ MS Frame ಮಾಡಿ ಸದರಿ Frame ನಲ್ಲಿ Cubical ಗಳನ್ನು ನಿರ್ಮಿಸಬೇಕಾಗಿದ್ದು, ಅವಶ್ಯಕತೆಯಿದ್ದಲ್ಲಿ Alumunium ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ.<br><br>ಮುಂದುವರೆದು, ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಕಾಮಗಾರಿಯನ್ನು ನಿಗಧಿತ ಅಂದಾಜು ಪಟ್ಟಿಯ ವೆಚ್ಚದಲ್ಲಿ ನಿರ್ವಹಿಸಲು ವ್ಯತ್ಯಾಸವಾದರೆ, ಕಾಮಗಾರಿಯು ಮುಕ್ತಾಯಗೊಳ್ಳುವ ಮುಂಚಿತವಾಗಿಯೇ ಅಂದಾಜು ಪಟ್ಟಿಯನ್ನು ಪರಿಷ್ಕರಣೆಗೊಳಿಸಿ, ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಮೋದನೆಗಾಗಿ Works Committee ಸಭೆಯಲ್ಲಿ ಮಂಡಿಸಲಾಗುವುದು ಎಂದು ತಿಳಿಸಿದ್ದು, ಅವಶ್ಯಕತೆ ಇದ್ದಲ್ಲಿ ಸದರಿ ಕಾಮಗಾರಿಯನ್ನು EIRL & Work slip ನಂತೆ ಕಾರ್ಯನಿರ್ವಹಿಸಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ. ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 8 | **Construction of return/ wing wall and drain for box culvert (at chainage 690) at APMC approach road for Kitturu Rani Channamma University, New campus, Hirebagewadi, Belagavi ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.** | **ರೂ. 5.00 ಲಕ್ಷಗಳು** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಆವರಣದಲ್ಲಿ ನೂತನ ಕಟ್ಟಡಗಳ, ರಸ್ತೆಗಳ, ಚರಂಡಿಗಳ ಹಾಗೂ ಇತರ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮುಕ್ತಾಯದ ಹಂತದಲ್ಲಿರುತ್ತದೆ. ಪ್ರಸ್ತುತ ಮಳೆಗಾಲದಲ್ಲಿ ನೂತನ ಆವರಣದಿಂದ ನೀರು Drain ಮುಖಾಂತರ ರಭಸವಾಗಿ ಹರಿದು Box Culvert ನಲ್ಲಿ ಬಂದ ನಂತರ ಪ್ರವಾಹದಂತಾಗಿ ಪಕ್ಕದಲ್ಲಿನ ಜಮೀನುಗಳಿಗೆ ನೀರು ನುಗ್ಗಿ ಬೆಳೆ ಹಾಗೂ ಜಮೀನುಗಳು ಹಾನಿಯಾಗುತ್ತಿವೆ. ಕಾರಣ, ಸದರಿ ನೀರನ್ನು ತಡೆಯುವಂತೆ ಕ್ರಮವಹಿಸಲು chainage 690 ರಲ್ಲಿ ನೀರು ಹರಿದು ಸವಕಳಿಯಾಗದಂತೆ ತಡೆಯಲು Construction of return/ wing wall and drain for box culvert (at chainage 690) at APMC, approach road for RCU, New campus, Hirebagewadi, Belagavi ಕಾಮಗಾರಿಯನ್ನು ರೂ. 5.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ. ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 9 | **Construction of earthen road and Erection of roofing sheets for Mallapa temple and other related works at Kitturu Rani Channamma University, New Campus, Hirebagewadi, Belagavi ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.** | **ರೂ. 5.00 ಲಕ್ಷಗಳು** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ನೂತನ ಕಟ್ಟಡಗಳನ್ನು ಹಿರೇಬಾಗೇವಾಡಿ ಗ್ರಾಮದ ಮಲ್ಲಪ್ಪನ ಗುಡ್ಡದಲ್ಲಿ 127 ಎಕರೆ ವಿಸ್ತೀರ್ಣದಲ್ಲಿ ಸ್ಥಳೀಯ ರೈತರ, ಗ್ರಾಮಸ್ಥರ ಸಹಕಾರದೊಂದಿಗೆ ಭವ್ಯವಾಗಿ ನಿರ್ಮಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಪ್ರಸ್ತುತ, ಸದರಿ ಗುಡ್ಡದಲ್ಲಿ ಮಲ್ಲಪ್ಪನ ದೇವಸ್ಥಾನವಿದ್ದು, ಪ್ರತಿ ವರ್ಷ ಗ್ರಾಮಸ್ಥರು ಮಲ್ಲಪ್ಪನ ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜೆಯನ್ನು ನಿರ್ವಹಿಸುವ ಪದ್ಧತಿಯನ್ನು ರೂಡಿಯಲ್ಲಿಟ್ಟುಕೊಂಡಿದ್ದು, ದೇವಸ್ಥಾನಕ್ಕೆ ಹೋಗಲು ಕಾಲುದಾರಿಯ ವ್ಯವಸ್ಥೆ ಹಾಗೂ ದೇವಸ್ಥಾನದ ಆವರಣದಲ್ಲಿ ಅಭಿವೃದ್ಧಿಯ ಕುರಿತು ಸ್ಥಳೀಯ ರೈತರು, ಗ್ರಾಮಸ್ಥರು ವಿಶ್ವವಿದ್ಯಾಲಯಕ್ಕೆ ವಿನಂತಿಸಿಕೊಳ್ಳುತ್ತಿದ್ದಾರೆ. ಕಾರಣ, ವಿಶ್ವವಿದ್ಯಾಲಯದ ನೂತನ ಆವರಣದ ಪಕ್ಕದಲ್ಲಿರುವ ಮಲ್ಲಪ್ಪನ ದೇವಸ್ಥಾನಕ್ಕೆ ಸಾರ್ವಜನಿಕರು ತೆರಳಲು ಬೇಂಡಿಗೇರಿ ರಸ್ತೆಯ ಮಾರ್ಗದಿಂದ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸಲು ಹಾಗೂ ದೇವಸ್ಥಾನ ಆವರಣದ ಮುಂಭಾಗದಲ್ಲಿ Roofing Sheets ಅಳವಡಿಸುವುದರೊಂದಿಗೆ 10 RCC ಬೆಂಚ್‌ಗಳನ್ನು ಅಳವಡಿಅಲು ರೂ. 5.00 ಲಕ್ಷಗಳ ವೆಚ್ಚದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ. ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 10 | **Providing, Installing and commissioning of Solar Street Light at Kitturu Rani Channamma University, New campus, 10 Hirebagewadi, Belagavi ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.** | **ರೂ. 25.00 ಲಕ್ಷಗಳು** |
| | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ನೂತನ ಕಟ್ಟಡಗಳನ್ನು ಹಿರೇಬಾಗೇವಾಡಿ ಗ್ರಾಮದ ಮಲ್ಲಪ್ಪನ ಗುಡ್ಡದಲ್ಲಿ ನಿರ್ಮಿಸುತ್ತಿದ್ದು, ಕಟ್ಟಡ ಕಾಮಗಾರಿ, ರಸ್ತೆ, ಚರಂಡಿ ಹಾಗೂ ಇತರ ಎಲ್ಲ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ. ಸದರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು M/s. BSR Infratech India Ltd., Bengaluru " ನೂತನ ಆವರಣದ ಮುಖ್ಯ ರಸ್ತೆ ಹಾಗೂ ಅಂತರಿಕ ರಸ್ತೆಗಳ ಬದಿಗಳಲ್ಲಿ ಸದರಿಯವರು ಒಟ್ಟು 100 Solar Street Light ಗಳನ್ನು ಅಳವಡಿಸುವುದಾಗಿ ತಿಳಿಸಿರುತ್ತಾರೆ. ಅದರಂತೆ, ನೂತನ ಆವರಣದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ Solar Street Light ಗಳನ್ನು ಅಳವಡಿಸುವುದು ಅವಶ್ಯವಿದ್ದು, ವಿಶ್ವವಿದ್ಯಾಲಯದ ವತಿಯಿಂದ 50 Solar Street Light ಗಳನ್ನು ಅಂದಾಜು ವೆಚ್ಚ ರೂ. 25.00 ಲಕ್ಷಗಳಲ್ಲಿ ಅಳವಡಿಸಲು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲು ಹಾಗೂ ಅದರಂತೆ ಕಾಮಗಾರಿಯನ್ನು ಕೈಗೊಳ್ಳಲು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

| ಕ್ರ.ಸಂ. | ಟಿಪ್ಪಣಿ | ಅಂದಾಜು ಮೊತ್ತ |
|---|---|---|
| 11 | **Providing breaker from substation including erection of new breaker for individual use and their connection from substation of RCU, New campus, Hirebagewadi, Belagavi ಕಾಮಗಾರಿಗೆ EOT ನೀಡುವ ಕುರಿತು.** | - |
| | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಹಿರೇಬಾಗೇವಾಡಿಯ ನೂತನ ಆವರಣದಲ್ಲಿ ವಿದ್ಯುತ್ ಸರಬರಾಜಿನ ಕಾಮಗಾರಿಗೆ ಹೆಸ್ಕಾಂ, ಬೆಳಗಾವಿ ಇವರಿಂದ 11KV HT installation of 88KVA CD ಅಳವಡಿಸಲಾಗಿದೆ. ಈಗಾಗಲೇ ಟ್ರಾನ್ಸಾರ್ಮರನ್ನು ಅಳವಡಿಸಲಾಗಿದೆ. ವಿಶ್ವವಿದ್ಯಾಲಯವು ನೂತನ ಆವರಣದಲ್ಲಿ ಪೂರ್ಣ ಪ್ರಮಾಣದಲ್ಲಿ ಸ್ಥಾಪಿತಗೊಂಡಾಗ proposed PT ಯನ್ನು 11000 110 volts ಆಗುವುದಾಗಿ ಅಧೀಕ್ಷಕ ಅಭಿಯಂತರರು, KPTCL, ಬೆಳಗಾವಿ ಇವರು ತಾಂತ್ರಿಕ ವಿವರಣೆಯನ್ನು ನೀಡಿರುತ್ತಾರೆ. | |

| | | |
|---|---|---|
| | | |

| | | |
|---|---|---|
| | ಅದರಂತೆ ವಿಶ್ವವಿದ್ಯಾಲಯದ ನೂತನ ಅವರಣದಲ್ಲಿ ವಿಶೇಷವಾಗಿ ಮೀಸಲಾದ Feeder Breaker ನ ಅವಶ್ಯಕತೆ ಇರುವುದರಿಂದ Providing breaker from substation including erection of new breaker for individual use and their connection from substation of RCU, New campus, Hirebagewadi, Belagavi ಕಾಮಗಾರಿಗೆ ವಿಶ್ವವಿದ್ಯಾಲಯದಿಂದ ಟೆಂಡರ್ ಆಹ್ವಾನಿಸಿ (90 ದಿನಗಳ ಅವಧಿಗೆ) ದಿನಾಂಕ 11.07.2025 ರಂದು ಚೇತನ್ ಎಲೆಕ್ಟ್ರಿಕಲ್ಸ್ (ಶ್ರೀ. ಚೇತನ್ ಬನಾಜ), ರಾಯಬಾಗ ಇವರಿಗೆ ಸದರಿ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆಯನ್ನು ನೀಡಿ, ಕಚೇರಿ ಆದೇಶವನ್ನು ನೀಡಲಾಗಿದೆ.<br><br>ಮುಂದುವರೆದು, ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ನಿರ್ವಹಿಸುತ್ತಿದ್ದು feeder breaker ನ ಉಪಕರಣಗಳ ಹಾಗೂ ಇತರ ಅವಶ್ಯಕ ಸಾಮಗ್ರಿಗಳ ಲಭ್ಯತೆಯು ತಡವಾದ ಕಾರಣ ಸದರಿ ಕಾಮಗಾರಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಅನುಮೋದನೆಯಂತೆ ದಿನಾಂಕ 31.03.2026 ರವರೆಗೆ ಅವಧಿ ವಿಸ್ತರಿಸಲಾಗಿತ್ತು.<br><br>ಪ್ರಸ್ತುತ ಸದರಿ ಕಾಮಗಾರಿಯ ಉಪಕರಣಗಳು ಲಭ್ಯವಾಗಿದ್ದು, ಮುಖ್ಯ ಅಭಿಯಂತರರು, ಬೆಂಗಳೂರು ಇವರು ಸದರಿ ಉಪಕರಣಗಳನ್ನು ತಪಾಸಣೆಗೊಳಪಡಿಸಿ ಸಲ್ಲಿಸಬೇಕಾಗಿದ್ದು, ಈ ಕುರಿತು ವಿಶ್ವವಿದ್ಯಾಲಯದಿಂದ ತಪಾಸಣಾ ಶುಲ್ಕವನ್ನು ಸಂಬಂಧಿಸಿದ ವಿಭಾಗಕ್ಕೆ ಭರಿಸಲಾಗಿದ್ದು, ವಿಶ್ವವಿದ್ಯಾಲಯಕ್ಕೆ feeder breaker ಲಭ್ಯವಿರುತ್ತದೆ. ಈ ಕುರಿತು ಕುಲಸಚಿವರು ಮಾತನಾಡಿ, "ಸದರಿ ಕಾಮಗಾರಿಯ ಕಡತವು 18 ಕಛೇರಿಗಳಿಗೆ ಪ್ರಯಾಣಿಸಿ ಮುಂದುವರೆಯುತ್ತ ಬಂದಿರುತ್ತದೆ" ಎಂದು ತಿಳಿಸಿದರು. ಈ ಕುರಿತ Flow Chart ನ್ನು ಸಹ ಗಮನಿಸಲಾಯಿತು. ಕಾರಣ ಸದರಿ ಕಾಮಗಾರಿಯನ್ನು ನಿರ್ವಹಿಸಲು ದಂಡರಹಿತವಾಗಿ ದಿನಾಂಕ 10.08.2026 ರವರೆಗೆ ಅವಧಿ ವಿಸ್ತರಣೆಯನ್ನು ನೀಡುವ ಕುರಿತು ಸದರಿ ಸಮಿತಿ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ಒಪ್ಪಿ, ಶಿಫಾರಸ್ಸು ನೀಡಲಾಯಿತು. | |

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ದಿನಾಂಕ: 20-07-2026 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಮೋದಿಸಿತು.

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು

| | | |
|---|---|---|
| I | 2026/07/I | 2026-27 ನೇ ಶೈಕ್ಷಣಿಕ ಸಾಲಿನಲ್ಲಿ ಕೋರ್ಸುಗಳ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳ ಅರ್ಜಿಯ ವಿಲೇವಾರಿ ಮತ್ತು ಠೇವಣಿ ಮೊತ್ತವನ್ನು ಮರು ಪಾವತಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಡಿಯಲ್ಲಿರುವ ಈ ಕೆಳಕಂಡ ಮಹಾವಿದ್ಯಾಲಯಗಳು ವಿದ್ಯಾರ್ಥಿಗಳ ಕೊರತೆಯ ಕಾರಣದಿಂದ ಕೋರ್ಸಗಳ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಮಹಾವಿದ್ಯಾಲಯಗಳಿಗೆ ಸ್ಥಳೀಯ ಸ್ಥಾನಿಕ ಸಮಿತಿಯು ಭೇಟಿ ನೀಡಿ UUCMS Portal ಮುಖಾಂತರ ವರದಿಯನ್ನು ನೀಡಲಾಗಿತ್ತು. ಸದರಿ ವರದಿಯನ್ನು ಅನುಸರಿಸಿ, ಸ್ಥಗಿತಕ್ಕಾಗಿ ಸರ್ಕಾರಕ್ಕೆ ಅಂತಿಮ ಅನುಮೋದನೆಗಾಗಿ ಕಳುಹಿಸಲಾಗಿತ್ತು. ಸದರಿ ಮಹಾವಿದ್ಯಾಲಯಗಳಿಗೆ ಸರ್ಕಾರದಿಂದ ಸ್ಥಗಿತಕ್ಕಾಗಿ ಅನುಮೋದನೆ ದೊರೆತಿದೆ<br>ಮುಂದುವರಿದು, ಅನುಮೋದಿತಗೊಂಡ ಮಹಾವಿದ್ಯಾಲಯಗಳು ಕೋರ್ಸುಗಳನ್ನು ಸ್ಥಗಿತಗೊಳಿಸಿದ ನಂತರ ಸದರಿ ಕೋರ್ಸುಗಳ ಠೇವಣಿ ಮೊತ್ತವನ್ನು ವಿಶ್ವವಿದ್ಯಾಲಯದಲ್ಲಿ ಯಾವುದಾದರೂ ಬಾಕಿ ಇದ್ದಲ್ಲಿ ಹಾಗೂ ಒಟ್ಟಾರೆ ಠೇವಣಿ ಮೊತ್ತದ ಮೇಲೆ ಶೇ.20% ಮೊತ್ತವನ್ನು ಸಂಸ್ಕರಣಾ ಶುಲ್ಕವನ್ನು ಕಡಿತಗೊಳಿಸಿ ಮರುಪಾವತಿಸಬೇಕಾಗುತ್ತದೆ. ಅದರಂತೆ ಒಟ್ಟು ಠೇವಣಿ ಮೊತ್ತದಲ್ಲಿ ಶೇ.20% ರಷ್ಟು ಕಡಿತಗೊಳಿಸಿ, ಉಳಿದ ಮೊತ್ತವನ್ನು ಮರಳಿಸಬೇಕಾದ ವಿವರಗಳು ಈ ಕೆಳಗಿನಂತಿವೆ: |

| ಕ್ರ. ಸಂ | ಮಹಾವಿದ್ಯಾಲಯದ ಹೆಸರು | ಸ್ಥಗಿತ ಗೊಳಿಸಿದ ಕೋರ್ಸುಗಳ ವಿವರಗಳು | ನಿಯಮಾನುಸಾರ ಪಾವತಿಸಬೇಕಾದ ಠೇವಣಿ ಮೊತ್ತ (ರೂ. ಗಳಲ್ಲಿ) | ವಿಶ್ವವಿದ್ಯಾಲಯದಲ್ಲಿ ಜಮಾ ಆಗಿರುವ ಠೇವಣಿ ಮೊತ್ತ (ರೂ. ಗಳಲ್ಲಿ) | ಕಡಿತಗೊಳಿಸಿದ ಸಂಸ್ಕರಣಾ ಶುಲ್ಕ 20% | ಮಹಾವಿದ್ಯಾಯಕ್ಕೆ ಮರುಪಾವತಿಸ ಬೇಕಾದ ಮೊತ್ತ (ರೂ. ಗಳಲ್ಲಿ) |
|---|---|---|---|---|---|---|
| 1 | ಬಿ.ಎಲ್.ಡಿ.ಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಬಸವನಬಾಗೇವಾಡಿ 586203 | ಎಂ.ಎ (ಇತಿಹಾಸ) | 6,00,000 | 3,00,000 | 1,20,000 | 1,80,000 |
| 2 | ಪೀಪಲ್ ಟ್ರೀ ಶಿಕ್ಷಣ ಸಂಸ್ಥೆಯ, ಬಿಬಿಎ, ಬಿಸಿಎ ಮತ್ತು ಬಿ.ಕಾಂ ಮಹಾವಿದ್ಯಾಲಯ, ಬೆಳಗಾವಿ. | ಬಿ.ಕಾಂ. | 6,00,000 | 6,00,000 | 1,20,000 | 4,80,000 |

ಮೇಲ್ಕಾಣಿಸಿದ ಕೋಷ್ಟಕದನ್ವಯ, 2026-27 ನೇ ಶೈಕ್ಷಣಿಕ ಸಾಲಿನಲ್ಲಿ ಕೋರ್ಸುಗಳ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳ ಅರ್ಜಿಯ ವಿಲೇವಾರಿ ಮತ್ತು ಠೇವಣಿ ಮೊತ್ತವನ್ನು ಮರು ಪಾವತಿಸಲು ಸಭೆಯು ಅನುಮೋದನೆ ನೀಡಿತು.

| II | 2026/07/ II | ಪರಿಷ್ಕೃತ 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳಿಗೆ ಮಾನ್ಯ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು. |
|---|---|---|
| | **ತೀರ್ಮಾನ** | ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳ ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸುವ ಉದ್ದೇಶದಿಂದ ಸಿಂಡಿಕೇಟ್ ಸದಸ್ಯರಾದ ಶ್ರೀ ಮಾರುತಿ ಮುಂಡರಗಿ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಕರ್ನಾಟಕ ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳಾದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕಲ್ಬುರ್ಗಿ ವಿಶ್ವವಿದ್ಯಾಲಯ, ಕಲ್ಬುರ್ಗಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ (ಮುಖ್ಯ), ಬೆಂಗಳೂರು ಇವುಗಳ ಸಂಯೋಜನಾ ಮತ್ತು ಇನ್ನಿತರ ಶುಲ್ಕಗಳನ್ನು ಪರಿಶೀಲಿಸಿ 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕವನ್ನು ಪರಿಷ್ಕರಿಸಿ ದಿನಾಂಕ: 04-12-2025 ರಂದು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಸಂಯೋಜನಾ ಶುಲ್ಕಗಳನ್ನು ಮರು ಪರಿಶೀಲಿಸಲು ಶ್ರೀಮತಿ. ಸರೋಜಿನಿ ಬಾಬಣ್ಣ ಢಂಗ ಅವರನ್ನು ಸದಸ್ಯರನ್ನಾಗಿ ನಾಮ ನಿರ್ದೇಶಿಸಲಾಗಿತ್ತು. ಅದರಂತೆ ಶ್ರೀಯುತರು ನೀಡಿರುವ ಸಲಹೆ ಮತ್ತು ಸೂಚನೆಗಳೊಂದಿಗೆ ಸಮಿತಿಯು ಮೂರನೇ ಮತ್ತು ಕೊನೆಯ ಸಭೆಯನ್ನು ದಿನಾಂಕ: 10-07-2026ರಂದು ಹಮ್ಮಿಕೊಂಡಿತ್ತು. ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡು ಅಂತಿಮ ಅನುಮೋದನೆಗಾಗಿ ಶಿಫಾರಸ್ಸು ಮಾಡಲಾಗಿದೆ: |

| ಕ್ರ. ಸಂ | ಇನ್ನೀತರ ಸಂಯೋಜನಾ ಶುಲ್ಕದ ವಿವರಣೆ | 2026-27ನೇ ಶೈಕ್ಷಣಿಕ ಸಾಲಿನಲ್ಲಿರುವ ಶುಲ್ಕ | ಸಭೆಯಲ್ಲಿ ಮಂಡಿಸಿ ಪರಿಷ್ಕೃತಗೊಂಡ ಶುಲ್ಕ | ಷರಾ |
|---|---|---|---|---|
| 1 | ಮಹಾವಿದ್ಯಾಲಯದ ಸ್ಥಳಾಂತರ | ರೂ. 1,08,900/- | ರೂ. 50,000/- | ಬೇರೆ ವಿಶ್ವವಿದ್ಯಾಲಯಗಳೊಂದಿಗೆ ತುಲನೆ ಮಾಡಿದಾಗ ಶುಲ್ಕವು ಹೆಚ್ಚಿರುವುದು ಕಂಡುಬಂದ ಹಿನ್ನೆಲೆಯಲ್ಲಿ, ಮಹಾವಿದ್ಯಾಲಯಗಳ ಹಿತದೃಷ್ಟಿಯಿಂದ ಸದರಿ ಶುಲ್ಕಗಳನ್ನು ಕಡಿತಗೊಳಿಸಲಾಗಿದೆ. |
| 2 | ಮಹಾವಿದ್ಯಾಲಯದ ಹೆಸರು ಬದಲಾವಣೆ | ರೂ. 1,33,100/- | ರೂ. 50,000/- | |

**ಸಭೆಯ ನಿರ್ಣಯ - 2:**

ಶ್ರೀಮತಿ ಸರೋಜಿನಿ ಬಾಬಣ್ಣ ಢಂಗ, ಮಾಜಿ ಸಿಂಡಿಕೇಟ್ ಸದಸ್ಯರು, ಸದರಿ ಸಂಯೋಜನಾ ಶುಲ್ಕವನ್ನು ಈಗಾಗಲೇ ಹೆಚ್ಚಿಸಿರುವ ಹಿನ್ನೆಲೆಯಲ್ಲಿ 2027-28ನೇ ಶೈಕ್ಷಣಿಕ ಸಾಲಿನಲ್ಲಿ ಶುಲ್ಕವನ್ನು ಮತ್ತೆ ಹೆಚ್ಚಿಸದೇ, 2026-27ನೇ ಸಾಲಿನ ಸಂಯೋಜನಾ ಶುಲ್ಕವನ್ನೇ ಮುಂದುವರಿಸುವಂತೆ ಸಲಹೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮಹಾವಿದ್ಯಾಲಯಗಳಿಗೆ ಹೆಚ್ಚಿನ ಹೊರೆ ನೀಡದೇ, ಸಭೆಯ ನಿರ್ಣಯ - 1ರಲ್ಲಿ ನಮೂದಿಸಿರುವ ಶುಲ್ಕಗಳ ಬದಲಾವಣೆಯನ್ನು ಹೊರತುಪಡಿಸಿ ಚಾಲ್ತಿಯಲ್ಲಿರುವ 2026-27ನೇ ಶೈಕ್ಷಣಿಕ ಸಾಲಿನ ಶುಲ್ಕವನ್ನು ಯಥಾವತ್ತಾಗಿ 2027-28ನೇ ಶೈಕ್ಷಣಿಕ ಸಾಲಿನಲ್ಲೂ ಮುಂದುವರಿಸಲು ವಿಶ್ವವಿದ್ಯಾಲಯಕ್ಕೆ ಶಿಫಾರಸ್ಸು ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯ ಕೈಗೊಂಡಿತು.

ಸಭೆಯ ನಡಾವಳಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

| | | |
|---|---|---|
| | | ಮುಂದುವರೆದು, ಪ್ರಮುಖವಾಗಿ ಕೆಳಕಂಡ ಅಂಶಗಳನ್ನು ಮಾನ್ಯರ ಅವಗಾಹನೆಗಾಗಿ ತರಲು ಬಯಸುತ್ತೇವೆ.<br><br>1. 2026-27ನೇ ಶೈಕ್ಷಣಿಕ ಸಾಲಿನಲ್ಲಿ ಈಗಾಗಲೇ ಸರ್ಕಾರದ ನಿರ್ದೇಶನ ಮತ್ತು ವೇಳಾಪಟ್ಟಿಯನ್ವಯ ಸಂಯೋಜನಾ ಪ್ರಕ್ರಿಯೆಗಳನ್ನು ಹಮ್ಮಿಕೊಳ್ಳಬೇಕಾಗಿದ್ದ ಕಾರಣ ಸದರಿ ಸಂಯೋಜನಾ ಶುಲ್ಕವನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈಗಾಗಲೇ ಅನುಷ್ಠಾನಗೊಳಿಸಿ ಶುಲ್ಕಗಳನ್ನು ವಸೂಲಿ ಮಾಡಲಾಗಿದೆ.<br><br>2. ಸದರಿ ಶುಲ್ಕಗಳ ಕುರಿತು ಶೇ.5% ಮಹಾವಿದ್ಯಾಲಯಗಳು ಮಾತ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಲಿಸಿದರೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶುಲ್ಕದಲ್ಲಿ ಹೆಚ್ಚಳವಿದೆ ಎಂದು ಪ್ರತಿಪಾದಿಸಿದ್ದಾರೆ. ಆದರೆ ವಾಸ್ತವವಾಗಿ ಸದರಿ ಶುಲ್ಕವು ಕಡಿಮೆ ಇರುತ್ತದೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳಲ್ಲಿ ಬಿ.ಎ. ಮತ್ತು ಬಿಎಸ್ಸಿ ಪದವಿ ಕಾರ್ಯಕ್ರಮಗಳಿಗೆ ವಿಷಯ ಸಂಯೋಜನೆ (Combination) ಆಧಾರಿತ ಶುಲ್ಕ ಪದ್ಧತಿಯನ್ನು ಅನುಸರಿಸಲಾಗುತ್ತಿದ್ದು ಪ್ರತಿ ವಿಷಯ ಸಂಯೋಜನೆಗೆ 22,000/- ಶುಲ್ಕವನ್ನು ನಿಗದಿಪಡಿಸಲಾಗಿದೆ. ಅದರಂತೆ, ಒಂದು ಮಹಾವಿದ್ಯಾಲಯವು ಮೂರು ವಿಷಯ ಸಂಯೋಜನೆಗಳನ್ನು ಹೊಂದಿದ್ದಲ್ಲಿ ಒಟ್ಟು ₹66,000/- ಹಾಗೂ ನಾಲ್ಕು ವಿಷಯ ಸಂಯೋಜನೆಗಳನ್ನು ಹೊಂದಿದ್ದಲ್ಲಿ 88,000/- ಶುಲ್ಕವನ್ನು ಪಾವತಿಸಬೇಕಾಗುತ್ತದೆ. ವಿಷಯ ಸಂಯೋಜನೆಗಳ ಸಂಖ್ಯೆ ಹೆಚ್ಚಾದಂತೆ ಪಾವತಿಸಬೇಕಾದ ಒಟ್ಟು ಶುಲ್ಕವೂ ಹೆಚ್ಚಾಗುತ್ತದೆ. ಆದರೆ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಸ್ತಾಪಿಸಲಾಗಿರುವ ನೂತನ ಶುಲ್ಕ ರಚನೆಯಲ್ಲಿ ವಿಷಯ ಸಂಯೋಜನೆಗಳ ಸಂಖ್ಯೆಯನ್ನು ಆಧರಿಸದೆ, ಕಾರ್ಯಕ್ರಮ (Programme) ಆಧಾರಿತ ಏಕರೂಪ ಶುಲ್ಕ ಪದ್ಧತಿಯನ್ನು ಅಳವಡಿಸಲು ಉದ್ದೇಶಿಸಲಾಗಿದೆ.<br><br>ಅದರಂತೆ, ಸಂಯೋಜನಾ ಮುಂದುವರಿಕೆಗೆ ಬಿ.ಎ. ಕೋರ್ಸುಗೆ ₹71,940/- ಹಾಗೂ ಬಿ.ಎಸ್ಸಿ ಕೋರ್ಸುಗೆ 76,350/- ಶುಲ್ಕವನ್ನು ಪ್ರಸ್ತಾಪಿಸಲಾಗಿದೆ. ಈ ಶುಲ್ಕವು ಆಯಾ ಕೋರ್ಸುಗಳಲ್ಲಿ ಮಹಾವಿದ್ಯಾಲಯವು ನಡೆಸುವ ವಿಷಯ ಸಂಯೋಜನೆಗಳ ಸಂಖ್ಯೆಯನ್ನು ಲೆಕ್ಕಿಸದೆ ಸಂಪೂರ್ಣ ಕಾರ್ಯಕ್ರಮಕ್ಕೆ ಅನ್ವಯವಾಗುತ್ತದೆ. ಹೀಗಾಗಿ, ನಾಲ್ಕು ಅಥವಾ ಅದಕ್ಕಿಂತ ಹೆಚ್ಚಿನ ವಿಷಯ ಸಂಯೋಜನೆಗಳನ್ನು ನಡೆಸುವ ಮಹಾವಿದ್ಯಾಲಯಗಳಿಗೆ, ಇತರೆ ವಿಶ್ವವಿದ್ಯಾಲಯಗಳಲ್ಲಿ ಅನುಸರಿಸಲಾಗುತ್ತಿರುವ ಪ್ರತಿ ವಿಷಯ ಸಂಯೋಜನೆಗೆ 22,000/- ಶುಲ್ಕ ಪದ್ಧತಿಗೆ ಹೋಲಿಸಿದರೆ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಸ್ತಾವಿತ ಕಾರ್ಯಕ್ರಮ ಆಧಾರಿತ ಶುಲ್ಕ ಪದ್ಧತಿಯು ಆರ್ಥಿಕವಾಗಿ ಕಡಿಮೆ ಹೊರೆಯಾಗುವುದರೊಂದಿಗೆ, ಶುಲ್ಕ ನಿರ್ಧಾರದಲ್ಲಿ ಏಕರೂಪತೆ ಮತ್ತು ಪಾರದರ್ಶಕತೆಯನ್ನು ತರಲಿದೆ.<br><br>ಆದುದರಿಂದ, ಸಮಿತಿಯು ಸಲ್ಲಿಸಿರುವ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಗಣಿಸಿ ಸಂಯೋಜನಾ ಶುಲ್ಕಗಳ ಸಮಿತಿಯು ನೀಡಿರುವ ಹೊಸ ಪ್ರಸ್ತಾವನೆಗಳನ್ನು ಅಳವಡಿಸಿಕೊಂಡು ಸದರಿ ಸಂಯೋಜನಾ ಶುಲ್ಕವನ್ನು ಕೂಡ 2027-28ನೇ ಶೈಕ್ಷಣಿಕ ಸಾಲಿನಲ್ಲಿ ಕೂಡ ಅನುಷ್ಠಾನಗೊಳಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿತ್ತು.<br><br>ಸದರಿ ವಿಷಯ ಕುರಿತು ಚರ್ಚಿಸಿದ ಸಭೆಯು ಪರಿಷ್ಕೃತ 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳಿಗೆ ಅನುಮೋದನೆ ನೀಡಿತು. |

| | | |
|---|---|---|
| III | 2026/07/ III | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾ (ಎಮ್.ಬಿ.ಎ) ವಿಭಾಗದ ಅಭ್ಯಾಸ ಮಂಡಳಿಗೆ ಡಾ. ಮಹಾಂತೇಶ ಕುರಿ ಇವರನ್ನು ತಾತ್ಕಾಲಿಕವಾಗಿ ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾ (ಎಮ್.ಬಿ.ಎ) ವಿಭಾಗದ ಅಭ್ಯಾಸ ಮಂಡಳಿಯ ಅಧ್ಯಕ್ಷರಾದ ಪ್ರೊ. ಎಸ್. ಸಿ. ಪಾಟೀಲ್ ಇವರ ಅವಧಿಯು ದಿನಾಂಕ: 15.07.2026 ರಂದು ಮುಕ್ತಾಯಗೊಂಡಿದ್ದು, ಸರದಿಯ ಪ್ರಕಾರ ಪ್ರೊ. ಎನ್. ಮಾರುತಿರಾವ್ ಇವರ ಸರದಿ ಬರುತ್ತದೆ. ಆದರೆ ದಿನಾಂಕ: 14.06.2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಪ್ರೊ. ಮಾರುತಿರಾವ್ ಇವರನ್ನು 2024-25ನೇ ಶೈಕ್ಷಣಿಕ ಸಾಲಿನಿಂದ 5 ವರ್ಷಗಳವರೆಗೆ ಸಂಶೋಧನಾ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯಿಂದ ಹೊರಗಿಡಲಾಗಿದ್ದರಿಂದ, ಸದರಿ ಸಿಂಡಿಕೇಟ್ ತೀರ್ಮಾನವನ್ನು ಜಾರಿಗೊಳಿಸುವ ಹಿನ್ನಲೆಯಲ್ಲಿ ಸದರಿಯವರ ಸ್ನಾತಕೋತ್ತರ ಅಭ್ಯಾಸ ಮಂಡಳಿಯ ಅಧ್ಯಕ್ಷರ ಜವಾಬ್ದಾರಿಯನ್ನು ಮೊಟಕುಗೊಳಿಸಿ ದಿನಾಂಕ: 16.07.2024 ರಿಂದ ಜಾರಿಗೆ ಬರುವಂತೆ ಎರಡು ವರ್ಷಗಳವರೆಗೆ ಪ್ರೊ. ಎಸ್. ಸಿ. ಪಾಟೀಲ್ ಇವರನ್ನು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಇದೀಗ ಪ್ರೊ. ಎಸ್. ಸಿ. ಪಾಟೀಲ್‌ರವರ ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಪ್ರೊ. ಮಾರುತಿರಾವ್ ಇವರ ಸರದಿ ಬರುತ್ತದೆ. ಸಿಂಡಿಕೇಟ ನಿರ್ಣಯದಂತೆ ಐದು ವರ್ಷದ ಅವಧಿಯು ಇನ್ನೂ ಮುಗಿಯದೇ ಇರುವುದರಿಂದ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾ (ಎಮ್.ಬಿ.ಎ) ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಮಹಾಂತೇಶ ಕುರಿ ಇವರನ್ನು ಸ್ನಾತಕೋತ್ತರ ಆಡಳಿತ ನಿರ್ವಹಣಾ (ಎಮ್.ಬಿ.ಎ) ವಿಭಾಗದ ಅಭ್ಯಾಸ ಮಂಡಳಿಯ ಅಧ್ಯಕ್ಷರನ್ನಾಗಿ ತಾತ್ಕಾಲಿಕವಾಗಿ ನಾಮನಿರ್ದೇಶನ ಮಾಡುವ ವಿಷಯವನ್ನು ಸಭೆಗೆ ಮಂಡಿಸಲಾಗಿತ್ತು.<br><br>ಚರ್ಚಿಸಿದ ಸಭೆಯು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾ (ಎಮ್.ಬಿ.ಎ) ವಿಭಾಗದ ಅಭ್ಯಾಸ ಮಂಡಳಿಗೆ ಡಾ. ಮಹಾಂತೇಶ ಕುರಿ ಇವರನ್ನು ತಾತ್ಕಾಲಿಕವಾಗಿ ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಲು ಅನುಮೋದನೆ ನೀಡಿತು. |
| IV | 2026/07/ IV | ಪ್ರೊ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು, ಮರಾಠಿ ವಿಭಾಗ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇಲ್ಲಿಗೆ ವರ್ಗಾವಣೆಗಾಗಿ ವಿನಂತಿಸಿರುವ ಕುರಿತು. |
| | **ತೀರ್ಮಾನ** | ಪ್ರೊ. ಸಿ. ಎನ್. ವಾಘಮಾರೆ ಪ್ರಾಧ್ಯಾಪಕರು, ಮರಾಠಿ ವಿಭಾಗ ಇವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 58 ರ ಪ್ರಕಾರ ಅಂತರಾಜ್ಯ ವಿಶ್ವವಿದ್ಯಾಲಯಗಳ ನಿಯಮಗಳ ಅನ್ವಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿಯ ಮರಾಠಿ ವಿಭಾಗದ ವಿವರಣೆಯೊಂದಿಗೆ ವರ್ಗಾವಣೆ ಕೋರಿ, ಅದಕ್ಕೆ ಅವಶ್ಯವಿರುವ ನಿರಾಕ್ಷೇಪಣಾ ಪ್ರಮಾಣ ಪತ್ರ(NOC) ನೀಡುವಂತೆ ಕೋರಿ ವಿನಂತಿಸಿಕೊಂಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಚರ್ಚಿಸಿ ಪ್ರೊ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು, ಮರಾಠಿ ವಿಭಾಗ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ವರ್ಗಾವಣೆಗೆ ವಿನಂತಿಸಿರುವುದಕ್ಕೆ ನಿರಾಕ್ಷೇಪಣಾ ಪ್ರಮಾಣ ಪತ್ರ(NOC) ನೀಡಲು ಸಭೆಯು ಅನುಮೋದನೆ ನೀಡಿತು. |

| | | |
|---|---|---|
| V | 2026/07/V | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದ ಹಿರೇಬಾಗೇವಾಡಿಯ ಮೊದಲನೇ ಹಂತದ ಕಟ್ಟಡ ಕಾಮಗಾರಿಯಲ್ಲಿ ಭಾರತ ಸರ್ಕಾರದ ಗೆಜೆಟ್ ನೋಟಿಫಿಕೇಶನ್ "Ministry of Environment, Forest and Climate Change Notification New Delhi, the 3rd November, 2022" ಪ್ರಕಾರ CPCB-4 ಮಾದರಿಯ ಡಿಜಿಯನ್ನು ಅಳವಡಿಸುವ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದ ಹಿರೇಬಾಗೇವಾಡಿಯ ಮೊದಲನೇ ಹಂತದ ಕಟ್ಟಡ ಕಾಮಗಾರಿಯಲ್ಲಿ ಭಾರತ ಸರ್ಕಾರದ ಗೆಜೆಟ್ ನೋಟಿಫಿಕೇಶನ್ "Ministry of Environment, Forest and Climate Change Notification New Delhi, the 3rd November, 2022" ಪ್ರಕಾರ CPCB-4 ಮಾದರಿಯ ಡಿಜಿಯನ್ನು ಅಳವಡಿಸಲು ಸಭೆಯು ಅನುಮೋದನೆ ನೀಡಿತು.<br><br>ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ ಹಿರೇಬಾಗೇವಾಡಿಯ ಮೊದಲನೇ ಹಂತದ ಕಟ್ಟಡ ಕಾಮಗಾರಿಯಲ್ಲಿ ಭಾರತ ಸರ್ಕಾರದ ಗೆಜೆಟ್ ನೋಟಿಫಿಕೇಶನ್ "Ministry Of Environment, Forest and Climate Change Notification New Delhi, the 3 November, 2022" ಪ್ರಕಾರ CPCB-4 ಮಾದರಿಯ ಡಿಜಿಯನ್ನು ಅಳವಡಿಸುವುದು ಕಡ್ಡಾಯವೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನೀಯರಿಂಗ್ ಉಪವಿಭಾಗ ಬೆಳಗಾವಿ ಇವರು ತಿಳಿಸಿದ್ದು, ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ವ್ಯವಸ್ಥಿತವಾದ ಪ್ರತ್ಯೇಕ ಇಂಜಿನಿಯರಿಂಗ್ ವಿಂಗ್ ಇಲ್ಲದೇ ಇರುವ ಕಾರಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನೀಯರಿಂಗ್ ಉಪವಿಭಾಗದ ಹಂತದಲ್ಲಿಯೇ ಮುಂದಿನ ಸೂಕ್ತ ಕ್ರಮ ಕೈಗೊಂಡು ಕಾಮಗಾರಿಯನ್ನು ಕೈಗೊಳ್ಳಲು ತಿಳಿಸಲಾಗಿದ್ದು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದ್ದು, ಸದರಿ ವಿಷಯ ಕುರಿತು ಚರ್ಚಿಸಿದ ಸಭೆಯು ಅನುಮೋದನೆ ನೀಡಿತು. |
| VI | 2026/07/ VI | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದ ಹಿರೇಬಾಗೇವಾಡಿಯಲ್ಲಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಠೇವಣಿ (Deposit) ಹಾಗೂ ಮೇಲ್ವಿಚಾರಣಾ ವೆಚ್ಚದ ಡಿ.ಡಿ ಯನ್ನು ಸಲ್ಲಿಸಿದ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿ ನೂತನ ಆವರಣಕ್ಕೆ 750 KVA Load ಸಾಮರ್ಥ್ಯವುಳ್ಳ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ಡೆಪಾಸಿಟ್ ಮೊತ್ತ ರೂ. 15,15,000/-ಗಳು ಹಾಗೂ ಮೇಲ್ವಿಚಾರಣಾ ವೆಚ್ಚ ರೂ. 74,987/- ಗಳು ಸೇರಿ ಒಟ್ಟು ರೂ. 15,89,987/-ಗಳ ಡಿ.ಡಿ ಯನ್ನು ಡಿ.ಡಿ ಸಂಖ್ಯೆ: 306075, ದಿನಾಂಕ: 20-05-2026 ನ್ನು "Section Officer, HESCOM., Hirebagewadi" ಇವರ ಹೆಸರಿಗೆ ಸಿದ್ಧಪಡಿಸಿ ಡಿ.ಡಿ. ಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದ್ದು, ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದ್ದು, ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| VII | 2026/07/ VII | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದ ಹಿರೇಬಾಗೇವಾಡಿಯಲ್ಲಿ 02 ಕೊಳವೆ ಬಾವಿಗಳ (Borewell) ವಿದ್ಯುತ್ ಸಂಪರ್ಕಕ್ಕಾಗಿ LT Line ಅಳವಡಿಸಲು ಅನುಮೋದನೆ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿ ನೂತನ ಅವರಣಕ್ಕೆ ನೀರಿನ ಅವಶ್ಯಕತೆಯನ್ನು ಪೂರೈಸುವುದಕ್ಕಾಗಿ ಎರಡು ಬೋರವೆಲ್ ಗಳನ್ನು ಕೊರೆಯಿಸಲಾಗಿದ್ದು, ಸದರಿ ಬೋರವೆಲ್‌ಗಳಿಂದ ನೀರನ್ನು ಶೇಖರಿಸುವ ಸಂಪ್‌ವರೆಗೆ ನೀರನ್ನು ಎತ್ತಲು ವಿದ್ಯುತ್ ಸಂಪರ್ಕಕ್ಕಾಗಿ LT Line ಅನ್ನು ಅಳವಡಿಸಲು ವಿಶ್ವವಿದ್ಯಾಲಯದ ಅಭಿಯಂತರರು ಸ್ಥಳ ಪರಿವೀಕ್ಷಣೆ ಮಾಡಿ ತಯಾರಿಸಿದ ಅಂದಾಜು ಪತ್ರಿಕೆಯಂತೆ ರೂ. 48,00,000/-ಗಳ ಅಂದಾಜು |

| | | |
|---|---|---|
| | | ಮೊತ್ತ ಖರ್ಚಾಗುವ ಸಾಧ್ಯತೆಯಿದ್ದು ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದ್ದು, ಕುಲಸಚಿವರು ನಿರಂತರ ಜ್ಯೋತಿಯ ಪರ್ಯಾಯ ಮಾರ್ಗವನ್ನು ಪರಿಶೀಲಿಸುತ್ತಿದ್ದು, ಅದು ಇದಕ್ಕಿಂತ ಅರ್ಧ ವೆಚ್ಚದಲ್ಲಿ ಮುಗಿಯಬಹುದು ಎಂದು ಸಭೆಗೆ ಮಾಹಿತಿ ನೀಡಿದರು. ಚರ್ಚಿಸಿದ ಸಭೆಯು ಕುಲಸಚಿವರು ಯಾವುದು ಯುಕ್ತವೋ ಅದನ್ನು ಜಾರಿಗೊಳಿಸಲು ಅನುಮತಿ ನೀಡಿ, ತುರ್ತು ಕ್ರಮವಹಿಸಲು ಸಭೆ ತೀರ್ಮಾನಿಸಿತು. |
| VIII | 2026/07/ VIII | ಅನುಷ್ಠಾನ ಸೇವಾ ಸಮಿತಿ ನರೇಂದ್ರ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರದ 2021-22ನೇ ಶೈಕ್ಷಣಿಕ ಸಾಲಿನಿಂದ 2026-27ನೇ ಶೈಕ್ಷಣಿಕ ಸಾಲಿನವರೆಗೆ ಸಂಯೋಜನೆ ಮುಂದುವರಿಕೆ ಶುಲ್ಕದಲ್ಲಿ (NOC ಶುಲ್ಕಗಳನ್ನು ಹೊರತುಪಡಿಸಿ) ವಿನಾಯಿತಿ ನೀಡುವ ಕುರಿತು ಸೂಕ್ತ ನಿರ್ದೇಶನ ಕೋರಿ. |
| | **ತೀರ್ಮಾನ** | ಅನುಷ್ಠಾನ ಸೇವಾ ಸಮಿತಿ ನರೇಂದ್ರ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಇವರು ಪತ್ರವನ್ನು ನೀಡಿ ಸಂಯೋಜನಾ ಮುಂದುವರಿಕೆ ಶುಲ್ಕದಿಂದ ವಿನಾಯಿತಿ ನೀಡಬೇಕೆಂದು ಕೋರಿರುತ್ತಾರೆ. ಮುಂದುವರೆದು, ಮಾನ್ಯ ಕುಲಪತಿಗಳು 2021-22ನೇ ಶೈಕ್ಷಣಿಕ ಸಾಲಿನಿಂದ 2026-27ನೇ ಶೈಕ್ಷಣಿಕ ಸಾಲಿನವರೆಗೆ ಸಂಯೋಜನೆ ಮುಂದುವರಿಕೆಗಾಗಿ ಆಯಾ ವರ್ಷದಲ್ಲಿ ಅನುಮೋದನೆಗೊಂಡ ಸಂಯೋಜನಾ ಶುಲ್ಕವನ್ನು ಆಕರಿಸುವಂತೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಸಂಯೋಜನಾ ಮುಂದುವರಿಕೆ ಶುಲ್ಕ ಸಿದ್ಧಪಡಿಸಲಾದ ವಿವರವನ್ನು ಈ ಕೆಳಕಾಣಿಸಿದಂತೆ ಸಭೆಗೆ ಮಂಡಿಸಲಾಯಿತು. (2021-22 ರಿಂದ 2026-27ನೇ ಸಾಲಿನವರೆಗಿನ ಶುಲ್ಕದ ವಿವರಗಳನ್ನು ಲಗತ್ತಿಸಲಾಗಿದೆ. |

| Academic Year | Affiliation type | Yoga | B.P.Ed | Total | Penalty (10%) | Grand Total |
|---|---|---|---|---|---|---|
| 2021-22 | Continuation | 28000 | 75000 | 103000 | 10300 | 113300 |
| 2022-23 | Continuation | 30800 | 82500 | 113300 | 11330 | 124630 |
| 2023-24 | Continuation | 33900 | 90800 | 124700 | 12470 | 137170 |
| 2024-25 | Continuation | 33900 | 90800 | 124700 | 12470 | 137170 |
| 2025-26 | Continuation | 37300 | 100000 | 137300 | 13730 | 151030 |
| 2026-27 | Continuation | 35000 | 146740 | 181740 | 18174 | 199914 |
| **Affiliation Total Amount** | | **198900** | **585840** | **784740** | **78474** | **863214** |
| UG B.P.Ed Course NOC Fees | | | | | | 73205 |
| UG Yoga Course NOC Fees | | | | | | 30250 |
| **Grand Total** | | | | | | **966669** |

ಸದರಿ ವಿಷಯ ಕುರಿತು ಚರ್ಚಿಸಿದ ಸಭೆಯು, ಅನುಷ್ಠಾನ ಸೇವಾ ಸಮಿತಿ ನರೇಂದ್ರ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರದ 2021-22ನೇ ಶೈಕ್ಷಣಿಕ ಸಾಲಿನಿಂದ 2026-27ನೇ ಶೈಕ್ಷಣಿಕ ಸಾಲಿನವರೆಗೆ ಸಂಯೋಜನೆ ಮುಂದುವರಿಕೆ ಶುಲ್ಕದಲ್ಲಿ (NOC ಶುಲ್ಕಗಳನ್ನು ಹೊರತುಪಡಿಸಿ) ಒಂದು ವರ್ಷಕ್ಕೆ 50% ರಂತೆ ವಿನಾಯಿತಿ ನೀಡಲು ಸಭೆಯು ಅನುಮೋದನೆ ನೀಡಿತು.

| | | |
|---|---|---|
| IX | 2026/07/IX | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿ ನೂತನ ಆವರಣದಲ್ಲಿ BSNL (500 Mbps) ಅಂತರ್ಜಾಲ ಸೇವೆಯನ್ನು ಪಡೆಯಲು ಅನುಮೋದನೆ ಕುರಿತು. |
| | **ತೀರ್ಮಾನ** | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೀರೇಬಾಗೇವಾಡಿ ನೂತನ ಆವರಣಕ್ಕೆ ವಿಶ್ವವಿದ್ಯಾಲಯವು ಆಡಳಿತ ವಿಭಾಗ ಮತ್ತು ವಿಜ್ಞಾನ ವಿಭಾಗಗಳು ಸ್ಥಳಾಂತರವಾಗಲಿದೆ. ಹೀರೇಬಾಗೇವಾಡಿ ನೂತನ ಆವರಣದಲ್ಲಿ ಕಚೇರಿ ಕೆಲಸಗಳಿಗಾಗಿ ಅವಶ್ಯವಿರುವ ಅಂತರ್ಜಾಲ ಸೇವೆಯನ್ನು ತುರ್ತಾಗಿ ಪಡೆಯಬೇಕಾಗಿರುತ್ತದೆ. ಈ ಕುರಿತು, BSNL ಬೆಳಗಾವಿ ವಿಭಾಗ ರವರೊಂದಿಗೆ, ಮಾತುಕತೆ ನಡೆಸಿ 24 Core OFC ಕೇಬಲ್ ಹಾಗೂ PN-8 HDPE Pipe ಗಳನ್ನು ಅಂದಾಜು 3.5 ಕಿ.ಮಿ ವರೆಗೆ ಉಚಿತವಾಗಿ ಅಳವಡಿಸಿ ಕೊಟ್ಟಿರುತ್ತಾರೆ. ಮುಂದುವರೆದು, ಸದರಿ ಆವರಣಕ್ಕೆ ಸುಮಾರು 500 Mbps ಅಂತರ್ಜಾಲ ಸೇವೆಯನ್ನು ಪಡೆಯುವುದು ಅವಶ್ಯವಿರುತ್ತದೆ.<br>ಪ್ರಸ್ತುತ ಭೂತರಾಮನಹಟ್ಟಿ ಆವರಣದಲ್ಲಿ BSNL (500 Mbps) ಅಂತರ್ಜಾಲ ಸೇವೆಯನ್ನು ರೂ.12,74,400/- ಗಳಿಗೆ ವಾರ್ಷಿಕವಾಗಿ ಪಡೆಯಲಾಗುತ್ತಿದೆ. ಇದೇ ದರದಲ್ಲಿ ನೂತನ ಆವರಣಕ್ಕೂ BSNL 500 Mbps ಅಂತರ್ಜಾಲ ಸೇವೆಯನ್ನು ಪಡೆಯಲು ಸಿಂಡಿಕೇಟ್ ಸಭೆಗೆ ಮಂಡಿಸಲಾಯಿತು. |
| X | 2026/07/X | ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27 ನೇ ಸಾಲಿನ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆ ಮುಕ್ತಾಯದ ನಂತರ ಹಿರೇಬಾಗೇವಾಡಿಯ ನೂತನ ಆವರಣಕ್ಕೆ ಸ್ಥಳಾಂತರಗೊಳಿಸಲು ಕುಲಸಚಿವರು ಸಭೆಯ ಅನುಮೋದನೆಯನ್ನು ಕೋರಿದರು. |
| | **ತೀರ್ಮಾನ** | ಸಭೆಯು ಸರ್ವಾನುಮತದಿಂದ ಅಗತ್ಯವಿರುವ ಎಲ್ಲ ಪೂರ್ವ ತಯಾರಿ ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕುಲಪತಿಗಳಿಗೆ ಸಂಪೂರ್ಣ ಅಧಿಕಾರ ನೀಡಿತು. ತುರ್ತು ಅಗತ್ಯತೆ ಪರಿಗಣಿಸಿ, ಈ ಶೈಕ್ಷಣಿಕ ಸಾಲಿನಿಂದ ವಿಜ್ಞಾನ ಸಂಗಮದಲ್ಲಿ ಸ್ನಾತಕೋತ್ತರ ಕೋರ್ಸ್ ಆರಂಭಿಸಲು ಮತ್ತು ಆಡಳಿತ ಹಾಗೂ ಪರೀಕ್ಷಾಂಗ ವಿಭಾಗಗಳನ್ನು ಸ್ಥಳಾಂತರಿಸಲು ಮುಂದೆ ಅಕ್ಟೋಬರ ತಿಂಗಳಿನಲ್ಲಿ ಉದ್ಘಾಟನೆಗೆ ಅಗತ್ಯವಿರುವ ಕ್ರಮಕೈಗೊಳ್ಳಲು ಮತ್ತು ಅಗತ್ಯ ತಯಾರಿಗೆ ಸರ್ವಾನುಮತದಿಂದ ಸಭೆ ಅನುಮತಿ ನೀಡಿತು. |

ಕುಲಸಚಿವರು ಎಲ್ಲ ಸದಸ್ಯರುಗಳಿಗೆ ವಂದನಾರ್ಪಣೆ ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

**ಇವರಿಗೆ,**

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

**ಪ್ರತಿ ಮಾಹಿತಿಗಾಗಿ:**

ಹಣಕಾಸು ಅಧಿಕಾರಿಗಳು,
ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.